ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಮೇ 2017

॥ ಧಿಯೋ ಯೋನಃ ಪ್ರಚೋದಯಾತ್ ॥


ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-17 ಸಂಚಿಕೆ-5 ಪುಟಗಳು-8 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಶ್ರೀ ಶಾರದಾ ಮಂಟಪದಲ್ಲಿ ಶಂಕರಜಯಂತಿ ಹಾಗೂ ಸಾಮೂಹಿಕ ಉಪನಯನ







ವೈಶಾಖ ಶುದ್ಧ ಪಂಚಮಿಯು ಶ್ರೀ ಶ್ರೀ ಶಂಕರಾಚಾರ್ಯ ಭಗವತ್ಪಾದರು ಲೋಕೋದ್ಧಾರಕ್ಕಾಗಿ ಈ ಭುವಿಯಲ್ಲಿ 12 ಶತಮಾನಗಳ ಹಿಂದೆ ಕಾಲಟಿಯುಲ್ಲಿ ಅವತಾರವೆತ್ತಿದ ದಿನ. ಈ ದಿನವನ್ನು ಶಂಕರ ಜಯಂತಿಯೆಂದೂ ತತ್ವಜ್ಞಾನಿಗಳ ದಿವಸವೆಂದೂ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಆಚರಿಸುತ್ತಾ ಬಂದಿವೆ. ಅಂತೆಯೇ ಶ್ರೀ ಶ್ರೀ ಶಂಕರಾಚಾರ್ಯ ಸ್ಥಾಪಿತ ಶ್ರೀ ಶೃಂಗೇರಿ ದಕ್ಷಿಣಾಮ್ನಾಯ ಪೀಠದ ಪರಂಪರಾಗತ ಶಿಷ್ಯರಾದ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಕುಂಜಿಬೆಟ್ಟು ಉಡುಪಿ ಇವರ ಆಶ್ರಯದಲ್ಲಿ ಶ್ರೀ ಶಂಕರ ಜಯಂತಿಯನ್ನು ಶ್ರೀ ಶಂಕರರ ತತ್ವಾದರ್ಶಗಳನ್ನು ಉಡುಪಿ ಜಿಲ್ಲೆಯಲ್ಲಿ ಪ್ರಚುರಪಡಿಸುತ್ತಿರುವ ಸಂಸ್ಥೆಯಾದ "ಜ್ಞಾನಭಾರತಿ"ಯ ಸಹಯೋಗದೊಂದಿಗೆ ತಾ.30-04-2017ನೇ ರವಿವಾರ ಭಕ್ತಿಪೂರ್ವಕವಾಗಿ ಆಚರಿಸಲಾಯಿತು.

ಇದಕ್ಕೆ ಪೂರ್ವಭಾವಿಯಾಗಿ ಮಹಿಳಾ ವೇದಿಕೆಯ ಸದಸ್ಯರು ಹಾಗೂ ಶ್ರೀ ಶಾರದಾ ದೇವಸ್ಥಾನದ ಪರಿಸರದ ಭಕ್ತರು ತಾ.28-04-2017ರಂದು ಶ್ರೀ ಶಂಕರಾಚಾರ್ಯ ವಿರಚಿತ ಸೌಂದರ್ಯಲಹರಿಯ ಅಖಂಡ ಪಾರಾಯಣ ನಡೆಸಿದರು. ತಾ.30-4-2017ರ ಬೆಳಗ್ಗೆ 9-00 ಗಂಟೆಯಿಂದ ಶ್ರೀ ಶಾರದಾ ದೇವಸ್ಥಾನದಲ್ಲಿ ಶ್ರಿ ಶಂಕರ ಅಷ್ಟೋತ್ತರ ಶತನಾಮಾವಳಿ, ಲಲಿತಾ ಸಹಸ್ರನಾಮ, ಸೌಂದರ್ಯ ಲಹರಿ ಪಾರಾಯಣ ನಡೆಸಿದರು. ಜ್ಞಾನಮಂದಿರದಲ್ಲಿ ಅದೇ ಸಮಯದಲ್ಲಿ ಉಪನೀತನಾಗುವ ವಟುವಿಗೆ ಅತ್ಯಂತ ಪ್ರಶಸ್ಥವಾದ ಈ ದಿನದಂದು ಉಪನಯನ ಸಂಸ್ಕಾರವನ್ನು ಸಂಘದ ನೇತೃತ್ವದಲ್ಲಿ ನೆರವೇರಿಸಲಾಯಿತು.

11 ಗಂಟೆಗೆ ಸರಿಯಾಗಿ ಸಭಾಕಾರ್ಯಕ್ರಮ ಆರಂಭವಾಯಿತು. ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರರಾಯರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಜ್ಞಾನಭಾರತಿಯ ಕಾರ್ಯದರ್ಶಿಗಳಾದ ಶ್ರೀ ಎಸ್.ಎಲ್ ಕರಣಿಕ್ ಇವರು ಸಭೆಗೆ ಅತಿಥಿಗಳನ್ನು ಹಾಗೂ ಸಭಾಸದರನ್ನು ಸ್ವಾಗತಿಸಿದರು. ಮಿಲಾಗ್ರಿಸ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಶ್ರೀ ರಾಮಚಂದ್ರ ರಾವ್ ಇವರ ಪತ್ನಿ ಶ್ರೀಮತಿ ಮಂದಾಕಿನಿ ಇವರು ಶ್ರೀ ಶಂಕರಾಚಾರ್ಯರ ಜೀವನದ ಬಗ್ಗೆ ಬೆಳಕು ಚೆಲ್ಲಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಉಡುಪಿ ಪೂರ್ಣಪ್ರಜ್ಞಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಟಿ.ಎಸ್.ರಮೇಶರವರು ಶ್ರೀ ಶಂಕರರ ಜೀವನ ಸಂದೇಶ ಹಾಗೂ ತತ್ವಗಳ ಬಗ್ಗೆ ಪ್ರವಚನ ನೀಡಿದರು. ನಂತರ ನಮ್ಮ ಸಂಘದ ಸಲಹೆಗಾರರಾದ ಶ್ರೀ ಸಿ.ಎಸ್ ರಾಯರು ಶ್ರೀ ಶಂಕರಾಚಾರ್ಯರ ಬಗ್ಗೆ ಬರೆದು ಪ್ರಕಟಿಸಿದ ಪುಸ್ತಕ "ಶ್ರೀ ಶ್ರೀ ಆದಿಶಂಕರಾಚಾರ್ಯರು ಪ್ರಥಮ ಮ್ಯಾನೇಜ್ಮೆಂಟ್ ಗುರು ಹಾಗೂ ವೇದಗಣಿತ"ದ ಬಿಡುಗಡೆಯನ್ನು ಬ್ರಹ್ಮಾವರದ ಎಸ್.ಎಂ.ಎಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ| ವೈ. ರವೀಂದ್ರನಾಥ ರಾವ್‌ರವರು ನೆರವೇರಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರರಾಯರು ಶ್ರೀ ಶಂಕರಾಚಾರ್ಯರ ಬಗ್ಗೆ ಹಾಗೂ ಶ್ರೀ ಸಿ.ಎಸ್ ರಾಯರ ಪುಸ್ತಕದ ಬಗ್ಗೆ ಮಾತನಾಡಿದರು. ಕೋಶಾಧಿಕಾರಿ ಶ್ರೀ ಕೆ. ಸುಧಾಕರ ರಾಯರು ಧನ್ಯವಾದವಿತ್ತರು. ನಂತರ ಶ್ರೀ ಶಾರದಾ ದೇವಸ್ಥಾನದಲ್ಲಿರುವ ಶ್ರೀ ಆದಿಶಂಕರರ ಮೂರ್ತಿಗೆ ಷೋಡಶೋಪಚಾರ ಪೂಜೆಯನ್ನು ಸಮರ್ಪಿಸಲಾಯಿತು. ಮಹಾಪೂಜೆಯ ನಂತರ ಭೋಜನಪ್ರಸಾದದೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು. ಡಾ| ವೈ.ಸುದರ್ಶನ್ ರಾವ್‌ರವರು ಕಾರ್ಯಕ್ರಮ ನಿರೂಪಿಸಿದರು.

---

॥ ಶ್ರೀ ಗುರುಭ್ಯೋ ನಮಃ ॥

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ-576102.

ಶ್ರೀ ಶೃಂಗೇರಿ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥಸ್ವಾಮಿಗಳವರ ಹಾಗೂ ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀಸ್ವಾಮಿಗಳವರ ಪರಮಾನುಗ್ರಹದೊಂದಿಗೆ

ಆತ್ಮೀಯ ಸಮಾಜ ಬಾಂಧವರೇ,

ನಮ್ಮ ಸಂಘವು ಆರಂಭಗೊಂಡು 50 ವರ್ಷಗಳು ಸಂಪೂರ್ಣಗೊಳ್ಳುತ್ತಿರುವ ಈ ಶುಭಸಂದರ್ಭದಲ್ಲಿ

**ಸಂಘದ ಸುವರ್ಣಮಹೋತ್ಸವ**

ಸಮಾರಂಭವನ್ನು ತಾ.28-05-2017ನೇ ರವಿವಾರ ಶ್ರೀ ಶಾರದಾ ಮಂಟಪದಲ್ಲಿ ಆಚರಿಸಲಿದ್ದೇವೆ.

ಈ ಪ್ರಯುಕ್ತ ಬೆಳಗ್ಗೆ ಬೆಳಗ್ಗೆ 10-30ರಿಂದ ನಡೆಯುವ ಸಭಾಕಾರ್ಯಕ್ರಮದಲ್ಲಿ

| | |
|---|---|
| ಆಶೀರ್ವಚನ | : **ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳು,** ಪೀಠಾಧಿಪತಿಗಳು, ಘನಪುರಿ ಸಂಸ್ಥಾನ, ಶ್ರೀ ಕೋದಂಡಾಶ್ರಮ ಮಠ, ಹೆಬ್ಬಾರು. |
| ಸ್ಮರಣ ಸಂಚಿಕೆ ಬಿಡುಗಡೆ | : **ಶ್ರೀ ಬಿ. ಚಂದ್ರಶೇಖರ ರಾವ್, ಮೂಡಬಿದ್ರಿ** ಜನರಲ್ ಮೆನೇಜರ್, ಕರ್ನಾಟಕ ಬ್ಯಾಂಕ್, ಮಂಗಳೂರು ಅಧ್ಯಕ್ಷರು, ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್, ಮೂಡಬಿದ್ರಿ. |
| ವಿಕಾಸ ಪುಸ್ತಕದ ಬಿಡುಗಡೆ | : **ಶ್ರೀ ರವೀಂದ್ರನಾಥ ಬೆಳ್ಳೆ** ನಿವೃತ್ತ ಜನರಲ್ ಮೆನೇಜರ್, MICO, ಬೆಂಗಳೂರು ಅಧ್ಯಕ್ಷರು ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ, ಬೆಂಗಳೂರು. |
| ಗೌರವ ಉಪಸ್ಥಿತಿ | : **ಶ್ರೀ ಎನ್. ಕೆ. ಜಗನ್ನಿವಾಸ ರಾವ್** ನ್ಯಾಯವಾದಿಗಳು; ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್ತಿನ ಸದಸ್ಯರು; ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.), ಮಂಗಳೂರು. |

ಇವರು ಭಾಗವಹಿಸಲಿರುವರು.

ಸಮಾಜ ಬಾಂಧವರೆಲ್ಲರಿಗೂ ಆದರದ ಸ್ವಾಗತವನ್ನು ಕೋರುವ :

ಅಧ್ಯಕ್ಷರು ಕಾರ್ಯದರ್ಶಿ ಕೋಶಾಧಿಕಾರಿ

ಹಾಗೂ ಆಡಳಿತ ಮಂಡಳಿಯ ಸರ್ವಸದಸ್ಯರು ಮತ್ತು ಸಲಹೆಗಾರರು

---

### ಕಾರ್ಯಕ್ರಮದ ವಿವರ

**ತಾ.27-05-2017 ಶನಿವಾರ**

| | |
|---|---|
| ಸಂಜೆ 6 ಗಂಟೆಗೆ | : ಹೆಬ್ಬಾರು ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳ ಆಗಮನ |
| | : ಪೂರ್ಣಕುಂಭ ಸ್ವಾಗತ |
| | : ಶ್ರೀಶಾರದಾ ದೇವಸ್ಥಾನದಲ್ಲಿ ಮಹಾಪೂಜೆ |
| | : ರಾತ್ರಿ ಭೋಜನ |

**ತಾ.28-05-2017 ರವಿವಾರ**

| | |
|---|---|
| ಬೆಳಗ್ಗೆ 7-30ಕ್ಕೆ | : ಪ್ರಾರ್ಥನೆ, ಸಂಕಲ್ಪ, ಗಣಹೋಮ ಆರಂಭ, |
| 8-00ರಿಂದ 9-00 | : ರುದ್ರ ಪಾರಾಯಣ |
| | : ಮಹಿಳಾವೇದಿಕೆಯಿಂದ ಭಜನೆ |
| 8-00ರಿಂದ 9-00 | : ಆಸಕ್ತರಿಗೆ ಹಾಗೂ ವಟುಗಳಿಗೆ ಸಂಧ್ಯಾವಂದನೆ ಪಾಠ (ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳ ಕೃಪಾಶೀರ್ವಾದದೊಂದಿಗೆ) |
| 8-00ರಿಂದ 10-00 | : ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳಿಗೆ ಸಮಾಜ ಬಾಂಧವರಿಂದ ಪಾದಪೂಜೆ |
| 8-30ರಿಂದ 10-00 | : ಉಪಾಹಾರ |
| 9-30ರಿಂದ 10-15 | : ಬೆಳ್ಳೆಯ ಪ್ರಸಿದ್ಧ ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮ |
| | : **ಮ್ಯಾಜಿಕ್ ಶೋ** |
| 10-30ರಿಂದ 1-00 | : **ಸಭಾಕಾರ್ಯಕ್ರಮ** |
| | : **ಶ್ರೀ ಶ್ರೀ ಗಳಿಂದ ಆಶೀರ್ವಚನ** |
| | : ಮಂತ್ರಾಕ್ಷತೆ |
| 1-00ರಿಂದ 2-00 | : ಭೋಜನ |
| 2-00ರಿಂದ 3-00 | : ಸಮಾಜ ಬಾಂಧವರಿಂದ ಸಾಂಸ್ಕೃತಿಕ ಕಾರ್ಯಕ್ರಮ |
| 3-30ರಿಂದ 5-30 | : ಸಮಾಜ ಬಾಂಧವರಿಂದ **ಯಕ್ಷಗಾನ "ಹಿಡಿಂಬಾ ವಿವಾಹ"** |

ವಿ.ಸೂ. : ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳಿಗೆ ಪಾದಪೂಜೆ ಮಾಡಿಸುವವರು ಬೆಳಗ್ಗೆ 8-00ರಿಂದ 10-00ರ ವರೆಗೆ ರೂ.501/- ಸೇವಾ ಶುಲ್ಕ ಪಾವತಿಸಿ ಮಾಡಿಸಿಕೊಳ್ಳಬಹುದು.

---

॥ ಓಂ ಶ್ರೀ ಗುರುಭ್ಯೋ ನಮಃ ॥

### ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚ್ಯಾರಿಟೇಬಲ್ ಟ್ರಸ್ಟ್ (ರಿ.)

ಕುಕ್ಕಿಕಟ್ಟೆ, ಉಡುಪಿ-576 101.

ಆತ್ಮೀಯ ಸಮಾಜ ಬಾಂಧವರೇ,

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಇದರ ಸುವರ್ಣ ಮಹೋತ್ಸವ ಸಂಭ್ರಮದ ದಿನ ತಾ.28-05-2017ರಂದು ಬೆಳಿಗ್ಗೆ ಗಂಟೆ 10-30ಕ್ಕೆ ನಡೆಯುವ ಸಭಾ ಕಾರ್ಯಕ್ರಮದಲ್ಲಿ ನಮ್ಮ ಸಮಾಜ ಬಾಂಧವರ ಮಧ್ಯೆ ಸಂಪರ್ಕದಲ್ಲಿ ಕ್ರಾಂತಿ ಉಂಟುಮಾಡಬಲ್ಲ ಅಂತರ್ಜಾಲ ಸಾಧನದ (Mobile App)

STHANIKA TULU BRAHMANA
Connecting community People across the Globe

**STHANIKA**

ಲೋಕಾರ್ಪಣೆ ನಡೆಯಲಿದೆ

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಇವರ ಸಹಯೋಗದೊಂದಿಗೆ ನಡೆಯುವ ಈ ಕಾರ್ಯಕ್ರಮಕ್ಕೆ ತಾವೆಲ್ಲರನ್ನೂ ಆದರದಿಂದ ಆಮಂತ್ರಿಸುವ

| | |
|---|---|
| **ಡಾ| ವೈ. ಸುದರ್ಶನ್ ರಾವ್** | **ಶ್ರೀ ವೈ. ಭುವನೇಂದ್ರ ರಾವ್** |
| ಸಂಚಾಲಕರು | ಅಧ್ಯಕ್ಷರು |
| ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚ್ಯಾರಿಟೇಬಲ್ ಟ್ರಸ್ಟ್ (ರಿ.) | ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ-576102 |

ವಿ.ಸೂ. : ಆ್ಯಂಡ್ರಾಯಿಡ್ ಮೊಬೈಲ್ ಹೊಂದಿರುವ ಸಮಾಜಬಾಂಧವರೆಲ್ಲರೂ Playstoreನಲ್ಲಿ ಉಚಿತವಾಗಿ ಲಭ್ಯವಿರುವ Sthanika Appನ್ನು ಡೌನ್‌ಲೋಡ್ ಮಾಡಿಕೊಂಡು ನೊಂದಾಯಿಸಿಕೊಳ್ಳಬೇಕಾಗಿ ವಿನಂತಿ

# ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಐವತ್ತು ವರ್ಷಗಳನ್ನು ಪೂರೈಸಿದೆ. ಈ ಐವತ್ತು ವರ್ಷಗಳಲ್ಲಿ ನಮ್ಮ ಸಮಾಜದ ಅಭಿವೃದ್ಧಿಗೆ ನೂರಾರು ಮಹನೀಯರ ಶ್ರಮದೊಂದಿಗೆ ಈ ಸಂಘವು ಕಾರಣೀಭೂತವಾಗಿದೆ ಹಾಗೂ ಈ ದೇಶದ ಅಭಿವೃದ್ಧಿಗೂ ತನ್ನ ಕಾಣಿಕೆಯಿತ್ತಿದೆ. ಇತರ ಸಂಘಗಳಿಗೆ ಆದರ್ಶಪ್ರಾಯವಾಗಿ ಮುನ್ನಡೆದಿದೆ. ಶ್ರೀ ಶಾರದಾಮಂಟಪವೆಂಬ ಭವ್ಯ ಸಭಾಂಗಣ, ಶ್ರೀ ಶೃಂಗೇರಿ ಜಗದ್ಗುರುಗಳಿಂದ ಪ್ರತಿಷ್ಠಾಪಿತ ಶ್ರೀ ಶಾರದಾದೇವಸ್ಥಾನ, ಜ್ಞಾನಮಂದಿರವೆಂಬ ಇನ್ನೊಂದು ಗುರುನಿವಾಸ/ಸಭಾಂಗಣದೊಂದಿಗೆ ನಮ್ಮ ಸಮಾಜಬಾಂಧವರ ಹೆಮ್ಮೆಯಗುರುತಾಗಿ ಮೂಡಿಬಂದಿದೆ. ಸುವರ್ಣಮಹೋತ್ಸವ ವರ್ಷದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡು ಈ 50ರ ಸಂಭ್ರಮವನ್ನು ಸಂಘದ ಇತಿಹಾಸದಲ್ಲಿ ದಾಖಲಿಸುವ ಉದ್ದೇಶದಿಂದ ಉಡುಪಿ ತಾಲೂಕಿನ ಎಲ್ಲಾ ಸಮಾಜಬಾಂಧವರ ಸಮಗ್ರ ಮಾಹಿತಿಯುಳ್ಳ ಕಲೆಹಾಕಿ ವಿಳಾಸ ಪುಸ್ತಕದ ಮುದ್ರಣವನ್ನು ಮಾಡಿದ್ದೇವೆ. ತಾ.28–5–2017ನೇ ರವಿವಾರ ಅದ್ದೂರಿಯಾಗಿ ಸುವರ್ಣಮಹೋತ್ಸವ ಸಮಾರಂಭವು ನಡೆಯಲಿದೆ. ಘನಪುರಿ ಸಂಸ್ಥಾನದ ಕೋದಂಡಾಶ್ರಮ ಮಠದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳು ಹಿಂದಿನ ದಿನ ಸಂಜೆಯೇ ಆಗಮಿಸಿ ಪೂರ್ಣಕುಂಭ ಸ್ವಾಗತ ಸ್ವೀಕರಿಸಿ ನಮ್ಮಲ್ಲಿಯೇ ಮೊಕ್ಕಾಂ ಹೂಡುವುದಾಗಿ ಅನುಗ್ರಹಿಸಿದ್ದಾರೆ. ತಾ.28–05–2017ರ ಬೆಳಿಗ್ಗೆ ಎಂಟರಿಂದ ಕಾರ್ಯಕ್ರಮಗಳು ಆರಂಭಗೊಳ್ಳಲಿದ್ದು ಗಣಹೋಮ, ಸ್ವಾಧ್ಯಾಯ ತಂಡದವರಿಂದ ಪಾರಾಯಣ, ಮಹಿಳಾ ವೇದಿಕೆಯವರಿಂದ ಭಜನೆ ಕಾರ್ಯಕ್ರಮ ಜರಗಲಿದೆ. ಹಾಗೆಯೇ ಬೆಳಗ್ಗೆ 8–00ರಿಂದ 9–00ರ ವರೆಗೆ ಆಸಕ್ತ ಸಮಾಜಬಾಂಧವರಿಗೆ ಹಾಗೂ ವಟುಗಳಿಗೆ ಸಂಧ್ಯಾವಂದನೆ ಕಲಿಕೆ ಕಾರ್ಯಕ್ರಮವನ್ನು ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳ ಸಮ್ಮುಖದಲ್ಲಿ ನಡೆಸಲಿದ್ದೇವೆ ನಂತರ 9–00ರಿಂದ 10–00ರ ತನಕ ಜಿಲ್ಲೆಯ ಪ್ರಸಿದ್ಧ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಪ್ರಮುಖ ಆಕರ್ಷಣೆಯಾದ “ಮ್ಯಾಜಿಕ್ ಶೋ”ದ ಬಳಿಕ ನಡೆಯುವ ಸಭಾಕಾರ್ಯಕ್ರಮದಲ್ಲಿ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರು ಆಶೀರ್ವಚನ ನೀಡಲಿರುವರು. ಅಂದು ಸಂಘವನ್ನು ಕಟ್ಟಿ ಮುನ್ನಡೆಸಿದ ಹಿರಿಯರಿಗೆ ಸನ್ಮಾನ, ವಿಳಾಸ ಪುಸ್ತಕದ ಬಿಡುಗಡೆ, ಸ್ಮರಣ ಸಂಚಿಕೆಯ ಬಿಡುಗಡೆ ಹಾಗೂ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಯ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ಪ್ರಾಯೋಜಿಸಿರುವ ಪ್ರಪಂಚದಾದ್ಯಂತ ನೆಲೆಸಿರುವ ನಮ್ಮ ಸಮಾಜಬಾಂಧವರ ಸಮಗ್ರಮಾಹಿತಿಯನ್ನು ಅಂಗೈಯಲ್ಲಿರುವ ನಮ್ಮ ಮೊಬೈಲ್‌ನಲ್ಲಿ ಒದಗಿಸುವ ವಿನೂತನ “ಸ್ಥಾನಿಕ ತುಳು ಬ್ರಾಹ್ಮಣ” ಆ್ಯಪ್‌ನ ಲೋಕಾರ್ಪಣೆ ನಡೆಯಲಿದೆ. ಮಧ್ಯಾಹ್ನದ ಭೋಜನಾನಂತರ ಸಂಘದ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸಮಾಜಬಾಂಧವರಿಂದ ಯಕ್ಷಗಾನ ಸಂಜೆ ಐದು ಗಂಟೆಯ ತನಕ ನಡೆಯಲಿದೆ. ನಮ್ಮ ಸಮಾಜ ಬಾಂಧವರು ಬರೆದು ಪ್ರಕಟಿಸಿರುವ ಪುಸ್ತಕಗಳ ಪ್ರದರ್ಶನ, ವಧೂವರರ ಮಾಹಿತಿಕೇಂದ್ರ, ನಮ್ಮ ಸಮಾಜಬಾಂಧವರ ಕರಕುಶಲ ವಸ್ತುಗಳ ಪ್ರದರ್ಶನ ಮಳಿಗೆಗಳೂ ನಮ್ಮ ಸಮಾಜಬಾಂಧವರ ಮನಸೂರೆಗೊಳ್ಳಲಿವೆ. ಹೀಗೆ ಬೆಳಗ್ಗಿನ ಉಪಾಹಾರದೊಂದಿಗೆ ಸಂಜೆ ಚಹಾದ ತನಕ ಕಣ್ಮನ ತುಂಬಿಕೊಳ್ಳುವ ಕಾರ್ಯಕ್ರಮಗಳೊಂದಿಗೆ ನಭೂತೋ ನಭವಿಷ್ಯತಿ ಎಂದು ಜರಗಲಿರುವ ಈ ಸುವರ್ಣ ಮಹೋತ್ಸವ ಕಾರ್ಯಕ್ರಮಕ್ಕೆ ನೀವೆಲ್ಲಾ ಬನ್ನಿ ನಿಮ್ಮವರನ್ನೂ ಕರೆತನ್ನಿ.

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.
–ಸಂಪಾದಕ ಮಂಡಳಿ

**ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ–21**

## ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ, ಕೋಡಿಗೆಹಳ್ಳಿ ಬೆಂಗಳೂರು



ಬೆಂಗಳೂರಿನ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾವು ನಮ್ಮ ಸಮಾಜಬಾಂಧವರ ಉಪಯೋಗಕ್ಕಾಗಿ ಸಭಾಭವನವನ್ನು ನಿರ್ಮಿಸಲು ಕೋಡಿಗೆಹಳ್ಳಿಯಲ್ಲಿ ಸ್ಥಳ ಖರೀದಿಸಿದಾಗ ಅಲ್ಲೊಂದು ಶ್ರೀ ಸುಬ್ರಹ್ಮಣ್ಯ ಸ್ವಾಮಿಗೆ ದೇವಾಲಯವನ್ನು ನಿರ್ಮಿಸುವುದಾಗಿ ಸಂಕಲ್ಪಿಸಿದರು. ಅಂತೆಯೇ ಸಭಾಭವನದ ಬಳಿ ಇದ್ದ ಯೋಗ್ಯನಿವೇಶನದಲ್ಲಿ ಶ್ರೀ ಶೃಂಗೇರಿ ಮಠದ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರ ಕೃಪಾಶೀರ್ವಾದಗಳೊಂದಿಗೆ 1997ನೇ ಇಸವಿಯಲ್ಲಿ ದೇವಸ್ಥಾನಕ್ಕಾಗಿ ಅಸ್ತಿಬಾರ ಹಾಕಲಾಯಿತು. ಹಾಗೂ 4 ವರ್ಷಗಳ ಅವಧಿಯಲ್ಲಿ ಸಂಪೂರ್ಣಗೊಳಿಸಿ 2001ನೇ ಇಸವಿಯಲ್ಲಿ ಪ್ರತಿಷ್ಠಾಮಹೋತ್ಸವ ಹಾಗೂ ಕುಂಭಾಭಿಷೇಕವನ್ನು ನೆರವೇರಿಸಲಾಯಿತು.

ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾದ ಆಡಳಿತದಲ್ಲಿ ಈ ದೇವಾಲಯವಿದ್ದು ನಿತ್ಯಪೂಜೆ ನಡೆಯುತ್ತಿದೆ. ಸಂಘದ ಆಶ್ರಯದಲ್ಲಿ ಯುಗಾದಿಯಿಂದ ಆರಂಭವಾಗಿ ಶಿವರಾತ್ರಿಯ ತನಕ ಎಲ್ಲಾ ಹಬ್ಬಗಳನ್ನು ಸಡಗರದಿಂದ ಇಲ್ಲಿ ಆಚರಿಸಲಾಗುತ್ತದೆ. ನಿತ್ಯಪೂಜೆ, ರುದ್ರಾಭಿಷೇಕ, ಗಣಹೋಮ ನವಗ್ರಹಹೋಮ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ. ಪಂಪಾಷಷ್ಠಿ ಇಲ್ಲಿ ವಿಶೇಷ. ಭಕ್ತರ ಅನುಕೂಲಕ್ಕಾಗಿ 2007ನೇ ಇಸವಿಯಲ್ಲಿ ಯಾಗಮಂಟಪವನ್ನು ಕಟ್ಟಲಾಗಿದೆ. ಇತ್ತೀಚಿಗೆ ನಾಗದೇವರಿಗೆ ಗುಡಿಯನ್ನು ಕಟ್ಟಲಿಕ್ಕಾಗಿ ಗುದ್ದಲಿಪೂಜೆಯನ್ನು ನೆರವೇರಿಸಲಾಗಿದೆ. ಅರ್ಚಕರ ವಾಸಕ್ಕಾಗಿ ನಿವಾಸವೂ ಇದೆ. ದೇವಳದ ಸಮೀಪದಲ್ಲೆ ವಿಶಾಲವಾದ ಸಭಾಭವನವಿದೆ.

ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು 2007ನೇ ಇಸವಿಯಲ್ಲಿ ಇಲ್ಲಿ ಭೇಟಿಯಿತ್ತು ಶ್ರೀ ಸ್ವಾಮಿಯನ್ನು ಪೂಜಿಸಿ ಭಕ್ತರಿಗೆ ಆಶೀರ್ವದಿಸಿದ್ದರು. ಶ್ರೀ ದೇವಳವು ಬೆಂಗಳೂರಿನ ನಮ್ಮ ಸಮಾಜಬಾಂಧವರ ಹಾಗೂ ಪರಿಸರದ ಭಕ್ತರ ಆರಾಧನಾ ಕ್ಷೇತ್ರವಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಶ್ರೀ ಸುಬ್ರಾಯ ಉಬರಳೆ 8197613757.

## ಶುಭ ಹಾರೈಕೆಗಳು



**ಚಿ। ಸತೀಶ್ ರಾವ್ ಮತ್ತು ಚಿ। ಸೌ। ಶ್ವೇತಾ**

**ನೂತನ ವಧೂವರರಿಗೆ ಶುಭ ಹಾರೈಸುವ,**

ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ.

**ಸಮಾಜ ಬಾಂಧವರಿಗೆ ಸಂಘದ ಸುವರ್ಣ ಮಹೋತ್ಸವ ಸಂಭ್ರಮದ ಶುಭಾಶಯಗಳು**

**ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ “ಗೃಹ ಸಾಲ” ಸಂಘದ ಪ್ರಾಥಮಿಕ ಸದಸ್ಯರಿಗೆ 11.50% (ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12% |
| ಹಳೆಯ ವಾಹನ | : | 13.5% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2010–11 ರಿಂದ 2015–16ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)

*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.

Inverters, UPS, Batteries, Repairs Maintenance & Charging

# ನೆನಪಿನ ಅಂಗಳದಿಂದ ನಮ್ಮ ಗುರು

- ವೈ. ಮೋಹನ ರಾವ್


'ನೆನಪಿನ ಅಂಗಳದಿಂದ ನಮ್ಮ ಗುರು'-ಈ ಕೃತಿಯನ್ನು ಶ್ರೀಮತಿ ದಿ| ಗುಲಾಬಿ ಮತ್ತು ಶ್ರೀ ದಿ| ಎನ್.ರಾಮರಾವ್ ವಿ.ಎಸ್. ಮಾತಾಪಿತೃಗಳ ಚರಣಾರವಿಂದಕ್ಕೆ ಲೇಖಕರಾದ ಎನ್.ಪದ್ಮನಾಭ ರಾವ್ ಅರ್ಪಿಸಿದ್ದಾರೆ.

ಈ ಕೃತಿಯ 'ಮುನ್ನುಡಿ'ಯಲ್ಲಿ ಡಾ| ಸಿ.ಆರ್. ಕರಿಸಿದ್ದಪ್ಪ, ನಿವೃತ್ತ ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಧಾರವಾಡ ಇವರು ಹೀಗೆ ಹೇಳುತ್ತಾರೆ – ''ನೆನಪಿನ ಅಂಗಳದಿಂದ ನಮ್ಮ ಗುರು ಎಂಬ ಪ್ರಸ್ತುತ ಸಂಕಲನವು ಕನ್ನಡ ಸಾಹಿತ್ಯದಲ್ಲೇ ವಿರಳವಾದ ಒಂದು ಕೃತಿ. ಈ ಗ್ರಂಥದಲ್ಲಿ ತರಬೇತಿ ಶಾಲೆಯಲ್ಲಿ ಶಿಕ್ಷಣ ಪಡೆದು ಹೋದ ವಿದ್ಯಾರ್ಥಿಗಳ ಅನಿಸಿಕೆಗಳ ಜೊತೆಗೆ ಆಶೆ ಆಕಾಂಕ್ಷೆಗಳನ್ನೂ ಮತ್ತು ಸಲಹೆ ಸೂಚನೆಗಳನ್ನೂ ಸಾರವತ್ತಾಗಿ ಕೊಡಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಅನಿಸಿಕೆಯನ್ನು ತಿಳಿಸುವಾಗ ತನ್ನ ತರಬೇತಿಯ ಸಮಯದಲ್ಲಿ ಪಡೆದ ಅನೇಕ ಘಟನೆಗಳಿಗೆ ವೈವಿಧ್ಯಮಯವಾಗಿ ಸ್ಪಂದಿಸಿದ್ದಾನೆ. ಗುರುಭಕ್ತಿ, ಗುರುವಿನ ಪ್ರೀತಿ, ವಿಶ್ವಾಸ, ಸ್ವಚ್ಛತೆ ಮತ್ತು ಶಿಸ್ತು ಇವುಗಳೂ ಶಿಷ್ಯವೃಂದದ ಮೇಲೆ ಎಷ್ಟೊಂದು ಪರಿಣಾಮ ಬೀರಿವೆ ಎನ್ನುವುದನ್ನು ಇಲ್ಲಿ ಸಂಗ್ರಹವಾಗಿರುವ ಪ್ರತಿಯೊಂದು ಬರಹದಲ್ಲಿಯೂ ಎದ್ದು ಕಾಣುತ್ತದೆ. ಗ್ರಂಥಾಲಯ ಶಿಕ್ಷಣವೂ ವೃತ್ತಿ ಶಿಕ್ಷಣವಾದ್ದರಿಂದ ವಿದ್ಯಾರ್ಥಿಗಳಿಗೆ ಕಲಿಸುವುದಕ್ಕಿಂತ ಅವರೇ ಕಲಿಯುವ ಆಸ್ಥೆಯನ್ನು ಹುಟ್ಟಿಸುವ ಭೀಮಕಾಯಕವನ್ನು ಈ ಶಾಲೆಯಲ್ಲಿರುವ ಗುರುವೃಂದ ಮಾಡಿದೆ ಎನ್ನುವುದನ್ನು ನಾವಿಲ್ಲಿ ಕಾಣಬಹುದು''.

ಕೃತಿಯ 'ಚೆನ್ನುಡಿ'ಯಲ್ಲಿ ಡಾ.ಆರ್.ಶಿವಣ್ಣ, ಅಧ್ಯಕ್ಷರು, ಬಸವತತ್ವ ಪ್ರಚಾರಕೇಂದ್ರ ಮತ್ತು ಸಂಶೋಧನಾ ಗ್ರಂಥಭಂಡಾರ, ಬೆಂಗಳೂರು ಹೀಗೆ ಅಭಿಪ್ರಾಯಪಟ್ಟಿದ್ದಾರೆ – ''ಮನುಷ್ಯನ ಜೀವನದಲ್ಲಿ ಅನೇಕ ಜನರ ಸ್ನೇಹ ಸಂಬಂಧಗಳು ಬಂದಿರುತ್ತವೆ. ಅವರಲ್ಲಿ ಕೆಲವರು ಆತ್ಮೀಯರಾಗಿರುತ್ತಾರೆ. ಅದಕ್ಕೆ ಕಾರಣ ಅವರ ಸಜ್ಜನಿಕೆ, ಪ್ರಾಮಾಣಿಕತೆ ಅಲ್ಲದೆ ಅವರು ನಡೆದುಕೊಳ್ಳುವ ರೀತಿ. ಇವೆಲ್ಲವುಗಳಿಂದ ಅವರು ತೀರ ಹತ್ತಿರದ ಸ್ನೇಹಿತರಾಗಿ ಉಳಿಯುತ್ತಾರೆ. ಅಂಥವರಲ್ಲಿ ಶ್ರೀ ಎನ್.ಪದ್ಮನಾಭರಾವ್‌ರವರೂ ಒಬ್ಬರು.

ಎನ್.ಪದ್ಮನಾಭರಾವ್‌ರವರು ನನ್ನ ಹಿರಿಯ ಮಿತ್ರರಲ್ಲಿ ಒಬ್ಬರು. ಅವರ ವ್ಯಕ್ತಿತ್ವಕ್ಕೆ ಹಲವು ಮಗ್ಗಲುಗಳಿವೆ. ಶ್ರೀಯುತರು ದೀರ್ಘಕಾಲ ಗ್ರಂಥಾಲಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಗೌರವಕ್ಕೂ ಪಾತ್ರರಾಗಿದ್ದಾರೆ. ಹಲವಾರು ಪುರಸ್ಕಾರಗಳನ್ನು ಪಡೆದುಕೊಂಡಿದ್ದಾರೆ''.

ಲೇಖಕರಾದ ಎನ್.ಪದ್ಮನಾಭರಾವ್, ಸಂಪಾದಕರು, ನಿವೃತ್ತ ಮುಖ್ಯ ಗ್ರಂಥಾಲಯಾಧಿಕಾರಿ ಹಾಗೂ ಪ್ರಾಂಶುಪಾಲರು, ಗ್ರಂಥಾಲಯ ತರಬೇತಿ ಶಾಲೆ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಕೃತಿಯಲ್ಲಿ 'ಅರಿಕೆ' ಹೀಗೆ ಮಾಡಿದ್ದಾರೆ– ''ನಾನು ಮುಖ್ಯ ಗ್ರಂಥಾಲಯಾಧಿಕಾರಿಯಾಗಿ ರಾಜ್ಯ ಕೇಂದ್ರ ಗ್ರಂಥಾಲಯ ಉದ್ಯಾನವನ, ಬೆಂಗಳೂರು, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಆ ಹುದ್ದೆಯೊಂದಿಗೆ ಸರ್ಕಾರಿ ಗ್ರಂಥಾಲಯ ತರಬೇತಿ ಶಾಲೆಯಲ್ಲಿ 1982ರಿಂದ 1986ರ ವರೆಗೆ ಪ್ರಾಂಶುಪಾಲನಾಗಿಯೂ ಅಧಿಕ ಕಾರ್ಯನಿರ್ವಹಿಸಿದ್ದು, ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳ ನಡುವೆ ಯಾವ ರೀತಿಯ ಸಂಬಂಧವಿತ್ತು ಎಂಬ ಬಗ್ಗೆ ಕಳಕಳಿಯಿಂದ ಪ್ರಾಮಾಣಿಕವಾಗಿ ವಿದ್ಯಾರ್ಥಿಗಳಿಂದ ಅವರ ಅನಿಸಿಕೆಗಳನ್ನು ಪಡೆದು, ತಾವು ತರಬೇತಿ ಪಡೆದಾಗ ಏನೆಲ್ಲಾ ಅನುಭವವನ್ನು ಪಡೆದೆವು ಎಂಬುದಾಗಿ ಅವರು ತಮ್ಮ ನೆನಪುಗಳನ್ನು ಮೆಲುಕು ಹಾಕಿದ್ದಾರೆ. ಅವರೆಲ್ಲರ ಬರಹಗಳನ್ನು ಸಂಪಾದಿಸಿ ಈ ಕಿರು ಹೊತ್ತಿಗೆ ರೂಪದಲ್ಲಿ ಹೊರತಂದು, ಇದರಿಂದ ವಿದ್ಯಾರ್ಥಿಗಳು–ಗುರುಗಳ ಸಂಬಂಧ ಹಾಗೂ ಅನುಭವಗಳು ಈಗಿನ ವಿದ್ಯಾರ್ಥಿ ಮತ್ತು ಅಧ್ಯಾಪಕ ವರ್ಗದವರಿಗೆ ಪ್ರೇರಣೆ ನೀಡಲೆಂಬ ಸದಭಿಪ್ರಾಯದ ದೃಷ್ಟಿಯಿಂದ ಈ ಗ್ರಂಥ ಪ್ರಕಟಣೆಗೊಳಿಸಲು ಪ್ರಯತ್ನಪಟ್ಟಿರುವೆನು''.




ಕೃತಿ : **'ನೆನಪಿನ ಅಂಗಳದಿಂದ ನಮ್ಮ ಗುರು,** ಲೇಖಕರು : **ಎನ್.ಪದ್ಮನಾಭ ರಾವ್** ಪ್ರಕಾಶಕರು : **ಸಾಹಿತ್ಯ ನಂದನ, ರಾಜಾಜಿನಗರ, ಬೆಂಗಳೂರು** ಬೆಲೆ : **ರೂ.100/-**

ಕೃತಿಯಲ್ಲಿ 'ತರಬೇತಿ ಪಡೆದ ವಿದ್ಯಾರ್ಥಿಗಳ ಅನಿಸಿಕೆಗಳು' ಎಂಬಲ್ಲಿ ಅನೇಕ ವಿದ್ಯಾರ್ಥಿಗಳ ಅಭಿಪ್ರಾಯ ಸಂಗ್ರಹ ಇದೆ. ಉದಾಹರಣೆಗಾಗಿ ಚೂಡಾಮಣಿ, ಬೆಂಗಳೂರು ಅವರು ಹೀಗೆ ಅಭಿಪ್ರಾಯ ನೀಡಿದ್ದಾರೆ–''ತಾವು ನಮ್ಮ ತರಬೇತಿ ತಂಡಕ್ಕೆ ಪ್ರಾಂಶುಪಾಲರಾಗಿ ಬಂದು ಬಿರುಕು ಬಿಟ್ಟಿದ್ದ ವಿದ್ಯಾರ್ಥಿಗಳ ಕೂಟಕ್ಕೆ ಯೋಗ್ಯ ಮಾರ್ಗದರ್ಶನ ನೀಡಿ ನಮ್ಮನ್ನು ಸರಿ ದಾರಿಗೆ ತಂದು ಒಗ್ಗಟ್ಟಿನಿಂದ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ ಅವರ ಮನಒಲಿಸಿದಿರಿ. ಸ್ವಚ್ಛ ಮನಸ್ಸಿನ ದಕ್ಷ ಆಡಳಿತಗಾರರಾಗಿ, ನಮಗೆ ಪ್ರಾಂಶುಪಾಲರಾಗಿ ಯೋಗ್ಯ ಹಿತವಚನ ಹಾಗೂ ಮಾರ್ಗದರ್ಶನ ನೀಡಿರುವ ತಮಗೆ ನಾವು ಅಭಾರಿಯಾಗಿದ್ದೇವೆ''.

ಇನ್ನೊಂದು ಅಧ್ಯಾಯದಲ್ಲಿ ಗ್ರಂಥಾಲಯ ತರಬೇತಿ ಶಾಲೆಯ ವಿವಿಧ ಸಮಾರಂಭಗಳ ಭಾವಚಿತ್ರಗಳು ಮತ್ತು ಮಾಹಿತಿ ಇದೆ. ಇನ್ನೊಂದು ಅಧ್ಯಾಯ 'ಗುರುವಿನ ಸೇವೆ ಹಾಗೂ ಗುರುವಿನ ನಮನ' ಇದೆ. ಮತ್ತೊಂದು ಅಧ್ಯಾಯ 'ಲೇಖಕರ ಸೇವಾ ಅವಧಿಯ ವಿವಿಧ ಸಮಾರಂಭಗಳ ಭಾವಚಿತ್ರಗಳಿವೆ. ಗಣ್ಯರ ಹಾಗೂ ಹಿತೈಷಿಗಳ ಅಭಿಪ್ರಾಯಗಳನ್ನೂ ನೀಡಲಾಗಿದೆ. ಲೇಖಕರು ತನ್ನ ಸೇವಾ ಅವಧಿಯ ಅನಿಸಿಕೆಗಳನ್ನು ಕೊನೆಯ ಅಧ್ಯಾಯದಲ್ಲಿ ತಿಳಿಸಿದ್ದಾರೆ..

ಗುರು ಮತ್ತು ಶಿಷ್ಯರ ಸಂಬಂಧ ಈಗೀಗ ಶಿಥಿಲವಾಗುತ್ತಿದೆ. ಆದರೆ ಎನ್.ಪದ್ಮನಾಭ ರಾವ್ ಮತ್ತು ಶಿಷ್ಯರ ಸಂಬಂಧಗಳಿಗೆ ''ನೆನಪಿನ ಅಂಗಳದಿಂದ ನಮ್ಮಗುರು'' ಆದರ್ಶವಾಗಿದೆ. ಈ ಪುಸ್ತಕವನ್ನು ಎಲ್ಲರೂ ಓದಬಹುದು.

## ವೃಷಭ ಮಾಸದ ವಿಶೇಷ ದಿನಗಳು

| | |
|---|---|
| 14–05–2017 | ವೃಷಭ ಸಂಕ್ರಮಣ<br>ಸಂಕಷ್ಟಹರ ಚತುರ್ಥಿ |
| 22–05–2017 | ಸರ್ವೈಕಾದಶಿ |
| 25–05–2017 | ಅಮಾವಾಸ್ಯೆ |
| 28–05–2017 | ಸಂಘದ ಸುವರ್ಣ ಮಹೋತ್ಸವ |
| 05–06–2017 | ಸರ್ವೈಕಾದಶಿ |
| 09–06–2017 | ಹುಣ್ಣಿಮೆ |
| 13–06–2017 | ಸಂಕಷ್ಟಹರ ಚತುರ್ಥಿ |
| 15–06–2017 | ಮಿಥುನ ಸಂಕ್ರಮಣ |

# ಸಾಧಿಸಿದರೆ ಸಬಳ ನುಂಗಬಹುದು


–ಜಿ.ಕೆ ಕೋಲ್ಪೆ

ಸುಮಾರು ಎರಡು ವರ್ಷದ ಹಿಂದೆ ಅನಂತೇಶ್ವರನ ದರ್ಶನ ಮಾಡಿ ರಥಬೀದಿಯ ಕಲ್ಲುಬೆಂಚಿನಲ್ಲಿ ಆರಾಮವಾಗಿ ಕುಳಿತಿದ್ದೆ. ಶುಭ್ರ ವಸ್ತ್ರಧಾರಿಯಾಗಿ ಹಣೆಗೆ ತಿಲಕವಿಟ್ಟು ಯುವಕರೋರ್ವರು ಕೈಯಲ್ಲಿ ಕಾಫಿ–ಚಾ–ಪ್ಲಾಸ್ಟಿಕ್ ಲೋಟ, ಕೆಟ್ಲ್‌ನೊಂದಿಗೆ (KETTLE–ಕಿಟ್ಲಿ) ನನ್ನ ಹತ್ತಿರ ಬಂದವರು 'ಬಿಸಿ ಟೀ ಇದೆ, ಕೊಡ್ಲಾ ಸಾರ್ ಎಂದರು. ಹತ್ತಿರದಲ್ಲೇ ಕೂತವರು ಕುಡಿಯುವುದನ್ನು ನೋಡಿ 'ಕೊಡಿ' ಎಂದೆ. ಹಣಕೊಡಲು ಹೋದರೆ, ಬೇಡ ಸಾರ್, ನಿಮ್ಮ ಪರಿಚಯ ನನಗಿದೆ. ನಿಮ್ಮ ಹತ್ತಿರದ ಸಂಬಂಧಿಯೋರ್ವರ ಸಹಾಯದಿಂದ ನಾನು ಈ ವ್ಯಾಪಾರದಲ್ಲಿ ಅಭಿವೃದ್ಧಿಯಾಗಿದ್ದೇನೆ ಹಾಗೂ ಅವರ ಕಟ್ಟಡದಲ್ಲೇ ವಾಸವಾಗಿದ್ದೇನೆ' ಎಂದರು. ವಿಷಯ ತಿಳಿದು, ವ್ಯಾಪಾರ–ವ್ಯವಹಾರಗಳಲ್ಲಿ ಸಂಬಂಧ–ಸ್ನೇಹಾಚಾರ ಮಧ್ಯೆ ಬರಬಾರದೆಂದು ತಿಳಿಹೇಳಿ ರೂ.5/– ಕೈಗಿತ್ತೆ. ಸ್ವೀಕರಿಸಿ ಮುಂದುವರಿದರು. ಅನಂತರವೂ ಒಂದೆರೆಡು ಸಲ ನಾನೇ ಕೇಳಿ 'ಚಾಯ್' ಕುಡಿದು ಹಣಕೊಟ್ಟಿದ್ದೆ. ಒಳ್ಳೆಯ 'ಚಹಾ'ದೊಂದಿಗೆ, ಅವರ ಮಾತು–ನಯ–ವಿನಯ ಮೆಚ್ಚುವಂತದ್ದಾಗಿತ್ತು. ದೇವಳದ ಸಂಕೀರ್ಣ ಸುತ್ತ ಬಹಳ ಚುರುಕಾಗಿ ವ್ಯವಹರಿಸುತ್ತಾ, ತಮ್ಮೊಂದಿಗೆ 'ತಮ್ಮನನ್ನು' ಕೂಡಾ ತೊಡಗಿಸಿಕೊಂಡು ದಿನೇದಿನೇ ಅಭಿವೃದ್ಧಿಯಾಗುತ್ತಿದ್ದರು. ವ್ಯವಹಾರ ವಿಸ್ತರಣೆಗೋಸ್ಕರ ಒಂದು ದ್ವಿಚಕ್ರ ವಾಹನ (ಸ್ಕೂಟರ್) ಕೂಡಾ ಕೊಂಡುಕೊಂಡರು. ಕಾಲಚಕ್ರ ಉರುಳಿತು. ಹೊಸಕಟ್ಟಡ ಒಂದರ ಎರಡನೇ ಅಂತಸ್ತಿನ ಒಂದು ಭಾಗವನ್ನು ಖರೀದಿಸಿದ ವಿಷಯ ತಿಳಿಯಿತು. 'ಗೃಹಪ್ರವೇಶ" ಸಮಾರಂಭಕ್ಕೆ ಆಮಂತ್ರಿಸಲು ತಮ್ಮ ಧರ್ಮಪತ್ನಿಯೊಂದಿಗೆ ನನ್ನ ಮನೆಗೆ ಬಂದು 'ಸಾರ್' ನಿಮ್ಮ ಸಂಬಂಧಿಯವರ ಫ್ಲಾಟ್ ಬಿಡುತ್ತಾ ಇದ್ದೇವೆ. ನನ್ನ ಸಂಸಾರಕ್ಕೆ, (ತಂದೆ–ತಾಯಿ–ತಮ್ಮ–ಹೆಂಡತಿ–ಮಗು) ಅದು ಸಾಕಾಗುತ್ತಿಲ್ಲ. ಇನ್ನು ತಮ್ಮನ ಲಗ್ನ ಕೂಡಾ ಆಗಬೇಕು. ಹೀಗಿರುವಾಗ, ನಮ್ಮ ಸ್ವಂತ "ಸೂರು" ಇದ್ದರೆ ಅನುಕೂಲವಾಗಬಹುದೆಂದು, ಬ್ಯಾಂಕಿನವರ ಸಹಕಾರದಿಂದ ಖರೀದಿಸಿದೆ. ಈ ಸಂಬಂಧ 'ಸತ್ಯನಾರಾಯಣ ಪೂಜೆ'ಗೆ ತಾವೆಲ್ಲ ಆಗಮಿಸಬೇಕೆಂದು ಕೇಳಿಕೊಂಡರು.

ಕರ್ನಾಟಕ ಗಡಿಭಾಗದ ತಮಿಳುನಾಡಿನ ಸಣ್ಣಪಟ್ಟಣ ವಾಸಿಯಾಗಿದ್ದು, ಬಡತನದಲ್ಲಿ ಬೆಳೆದ ಈ ಬ್ರಾಹ್ಮಣ ಕುಟುಂಬ, ವ್ಯವಹಾರಗಳಲ್ಲಿ ಸೋಲುಂಡು ಊರುಬಿಟ್ಟು ಬೆಂಗಳೂರಲ್ಲಿ ಸ್ವಲ್ಪ ಸಮಯ ವ್ಯವಹಾರ ನಡೆಸಿ, ಸ್ನೇಹಿತರೋರ್ವರ ಸಲಹೆಯಂತೆ ಉಡುಪಿಗೆ ಬಂದು ತಮ್ಮ ಪುತ್ರರೀರ್ವರ ಸಹಾಯದಿಂದ ವ್ಯವಹಾರ ಮುಂದುವರಿಸಿದ್ದರು. ಹಿರಿಯ ಪುತ್ರ ನಾಗೇಂದ್ರರೇ ಈ ಕಥಾನಾಯಕ. ತಂದೆ–ತಾಯಿಗಳ ಸೇವೆ ಮಾಡುತ್ತಾ, ತಮ್ಮನೊಂದಿಗೆ ಸಂಸಾರದ ಜವಾಬ್ದಾರಿ ಹೊತ್ತುಕೊಂಡು ತಮ್ಮ ಕಾಯಕವನ್ನು ಮುಂದಕ್ಕೂ ನಿಷ್ಠೆಯಿಂದ ಮಾಡುವ ಇರಾದೆಯನ್ನು ತಿಳಿಸಿದರು. "ಊರಲ್ಲಿರುವಾಗ, ಬಂಧು ಬಳಗದವರು ಉಂಡು–ತಿಂದುಕೊಂಡು ಹೋದವರೂ ಇದ್ದಾರೆ. ನಮ್ಮ ಕಷ್ಟಕಾಲದಲ್ಲಿ ಯಾರೂ ಇರಲಿಲ್ಲ. ಈಗ ಕೆಲವರು ನಮ್ಮ ಅಭಿವೃದ್ಧಿಯನ್ನು ಹೊಗಳುವವರೂ ಇದ್ದಾರೆ– ಹಾಗೇ ಹೊಟ್ಟೆ ಕಿಚ್ಚು ಪಡುವವರೂ ಇದ್ದಾರೆ. ಬಿದ್ದಾಗ ಮೇಲೆ ಎತ್ತದವರು, ಇದ್ದಾಗ ಹೊಗಳಿ ಹೊನ್ನ ಶೂಲಕ್ಕೆ ಏರಿಸುತ್ತಾರೆ. ಆದರೆ ಉಡುಪಿ ಶ್ರೀಕೃಷ್ಣನ ದಯೆ ನಮ್ಮ ಮೇಲಿದೆ. ನಿಮ್ಮ ಸಂಬಂಧಿಯವರ ಸಹಕಾರವನ್ನೂ ಸದಾಸ್ಮರಿಸುತ್ತೇವೆ. ನಿಮ್ಮಂತಹ ಹಿರಿಯರ ಆಶೀರ್ವಾದ ಸದಾ ಇರಲಿ" ಎನ್ನುತ್ತಾ ತಮ್ಮ ಮಡದಿಯೊಂದಿಗೆ ಕಾಲಿಗೆ ಅಡ್ಡಬಿದ್ದರು ಬಾಲ್ಯದಲ್ಲಿ ಚಾಯ್ ಮಾರುತ್ತಾ ಜೀವನದ ನಾನಾಹಂತದಲ್ಲಿ ಸಾಧನೆ ತೋರಿದ ಪ್ರಧಾನಿ ಮೋದಿಯವರ ನೆನಪಾಗಿ, "ನಿಮ್ಮ ಈ ಕಾಯಕ ಇಂದಿನ ನಿರುದ್ಯೋಗಿಗಳಿಗೆ ದಾರಿದೀಪವಾಗಲಿ, ನಿಮ್ಮ ಭವಿಷ್ಯ ಉಜ್ವಲವಾಗಲಿ, ಶ್ರೀಕೃಷ್ಣನ ಅನುಗ್ರಹ ಸದಾ ನಿಮಗಿರಲಿ! ಎಂದು ಮನಸಾರೆ ಹಾರೈಸಿದೆ.

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

**ಫೋನ್ : 2556536 (R), 2555466 (O), Mobile : 9845149521**



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ| ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

With Best Compliments From :
Ph : 98459 92859
**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ| ಅಂಬಲಪಾಡಿ ಕೃಷ್ಣರಾವ್, ಡಾ| ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ| ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ| ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ| ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ| ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕೆ ಕೃಷ್ಣರಾವ್ ದೊಡ್ಡಣಗುಡ್ಡೆ

## ವೃತ್ತಿ ಶಿಕ್ಷಣ ಸೀಟು ಸಿಗದವರಿಗೆ ಕಲಿಯುವ ಅವಕಾಶ

–ಎನ್.ಪದ್ಮರಾಜ್

ಎಸ್.ಎಸ್.ಎಲ್.ಸಿ ಪಾಸಾದ ಬಳಿಕ ಏನು ಮಾಡುವುದು? ಎಂಬ ಪ್ರಶ್ನೆ ಅನೇಕ ಹೆತ್ತವರಿಗೆ ಗೊಂದಲವನ್ನುಂಟುಮಾಡುವುದನ್ನು ಕಂಡಿದ್ದೇನೆ. ವಿದ್ಯಾರ್ಥಿ ಉತ್ತಮ ಅಂಕಗಳನ್ನು ಪಡೆದರೆ ಅವರನ್ನು ಹೆತ್ತವರು ಪಿಯುಸಿ, ಇಂಜಿನಿಯರಿಂಗ್ ಅಥವಾ ಮೆಡಿಕಲ್‌ಗೆ ಪ್ರವೇಶ ಕೊಡಿಸಲು ಉತ್ಸುಕರಾಗಿರುತ್ತಾರೆ. ಕಡಿಮೆ ಅಂಕ ಪಡೆದರೆ ಅಥವಾ ಅನುತ್ತೀರ್ಣ ಆದರೆ ಅವರ ಗೋಳು ಕೇಳಲು ಅಸಾಧ್ಯ ವಾಗಿರುತ್ತದೆ. ಇವರಿಗಾಗಿಯೇ ಭಾರತ ಸರಕಾರದವರು ವೃತ್ತಿಪರ ತರಬೇತಿಯನ್ನು ರೂಪಿಸಿದ್ದಾರೆ. ಇದಕ್ಕಾಗಿಯೇ ಉದ್ಯೋಗ ಮತ್ತು ತರಬೇತಿ ಎಂಬ ಡಿಪಾರ್ಟ್‌ಮೆಂಟ್‌ನ್ನು ಮಿನಿಸ್ಟ್ರಿ ಆಫ್ ಇಂಡಿಯಾದವರು ರೂಪಿಸಿದ್ದಾರೆ. ಪ್ರತಿಯೊಂದು ಪ್ರಾಂತ್ಯದಲ್ಲಿ ಐಟಿಐ (industrial training institute)ಗಳನ್ನು ಸ್ಥಾಪಿಸಿದ್ದಾರೆ. ಇವನ್ನು ಹೆತ್ತವರು ಉಪಯೋಗಿಸಿ ಕೊಳ್ಳಬಹುದು.

ಎಸ್‌ಎಸ್‌ಎಲ್‌ಸಿ ಪಾಸ್ ಅಥವಾ ಫೇಲ್ ಆದವರು ಈ ಸಂಸ್ಥೆಗಳಿಗೆ ಸೇರಬಹುದು. ಇವರೆಲ್ಲರಿಗೂ ಪ್ರೋತ್ಸಾಹ ಧನ ಸಿಗುತ್ತದೆ. ಈ ಸಂಸ್ಥೆಗಳಲ್ಲಿ ಪ್ರಾಕ್ಟಿಕಲ್‌ಗೆ ಹೆಚ್ಚು ಒತ್ತು ಕೊಡುವರು. ದಿನದಲ್ಲಿ ಎರಡು ಗಂಟೆ ತೀಯರಿ ಅಭ್ಯಾಸವಿರುವುದು. ತೀಯರಿ, ವರ್ಕ್ ಕ್ಯಾಲ್ಕುಲೇಶನ್, ಇಂಜಿನಿಯರಿಂಗ್ ಡ್ರಾಯಿಂಗ್ ಮತ್ತು ಪ್ರಾಕ್ಟಿಕಲ್ ವಿಷಯಗಳನ್ನು ಹೇಳಿಕೊಡುತ್ತಾರೆ. ಒಂದು ವರ್ಷದ ಮತ್ತು ಎರಡು ವರ್ಷಗಳ ಅವಧಿಯ ಕೋರ್ಸ್‌ಗಳು ಇರುತ್ತವೆ. ಫಿಟ್ಟರ್, ಟರ್ನರ್, ಮೆಕ್ಯಾನಿಸ್ಟ್, ಮೆಕ್ಯಾನಿಸ್ಟ್ ಗ್ರೈಂಡರ್, ವೆಲ್ಡರ್, ಮೆಕ್ಯಾನಿಕ್ ಮೋಟಾರು ವೆಹಿಕಲ್, ಮೆಕ್ಯಾನಿಕ್ ಡೀಸೆಲ್, ಮುಂತಾದ ಹಲವು ಕೋರ್ಸ್‌ಗಳು ಇರುತ್ತವೆ. ಡ್ರಾಫ್ಟ್‌ಮೆನ್ ಮೆಕ್ಯಾನಿಕಲ್, ಡ್ರಾಫ್ಟ್‌ಮೆನ್ ಸಿವಿಲ್, ಇಲೆಕ್ಟ್ರೀಶಿಯನ್, ವೈಯರ್‌ಮೆನ್, ಮೆಕ್ಯಾನಿಕಲ್ ಇಲೆಕ್ಟ್ರಾನಿಕ್ಸ್, ರೆಫ್ರಿಜರೇಟರ್ ಮೆಕ್ಯಾನಿಕ್, ವಯರ್ ಮೆನ್ ಮುಂತಾದವು ಕೂಡಾ ಇರುತ್ತವೆ. ಕಟ್ಟಿಂಗ್ ಆಂಡ್ ಟೈಲರಿಂಗ್, ಫ್ಯಾಷನ್ ಡಿಸೈನ್, ಸ್ಟೆನೋಗ್ರಾಫಿ ಇಂಗ್ಲೀಷ್ ಮುಂತಾದ ಹಲವು ವಿಷಯಗಳಲ್ಲಿ ತರಬೇತಿ ಕೊಡುತ್ತಾರೆ. ಹೀಗೆ ಸುಮಾರು 120 ವಿಷಯಗಳಲ್ಲಿ ತರಬೇತಿ ಪಡೆಯಬಹುದು. ತರಬೇತಿ ಮುಗಿಸಿದ ಬಳಿಕ ಆಲ್ ಇಂಡಿಯಾ ಟ್ರೇಡ್‌ಟೆಸ್ಟ್ ಇರುತ್ತದೆ. ಇಲ್ಲಿ ಪಾಸಾದ ವಿದ್ಯಾರ್ಥಿಗಳನ್ನು "ಸೆಮಿಸ್ಕಿಲ್ಡ್" ಎಂದು ಕರೆಯುತ್ತಾರೆ. ಇವರಿಗೆ ಉದ್ಯೋಗಪತಿಗಳು ಕೂಡಲೇ ಅವರ ಕಾರ್ಖಾನೆಗಳಲ್ಲಿ ಕೆಲಸ ಕೊಡುತ್ತಾರೆ. ಅಲ್ಲಿ ಅವರಿಗೆ ಉತ್ತಮ ಸಂಬಳ ಸಿಗುತ್ತದೆ.

ಇವರು ಮುಂದೆಯೂ ಕಲಿತು "ಸ್ಕಿಲ್ಡ್" ಆಗಲು ಉತ್ತಮ ಅವಕಾಶವಿರುತ್ತದೆ. 20 ಅಂಶಗಳ ಕಾರ್ಯಕ್ರಮದ ಅಡಿಯಲ್ಲಿ ಎಪ್ರೆಂಟಿಶಿಪ್ ಟ್ರೈನಿಂಗ್‌ಗೆ ಸೇರಬಹುದು. ಅಲ್ಲಿ ಒಂದು ವರ್ಷದಲ್ಲಿ ಅವರು ಅನುಭವವನ್ನು ಉತ್ತಮ ಪಡಿಸಿ ಕೊನೆಯಲ್ಲಿ ಜರುಗುವ ಎಪ್ರೆಂಟಿಶಿಪ್ ಸಿಪ್ ಪರೀಕ್ಷೆಯಲ್ಲಿ (ಆಲ್ ಇಂಡಿಯಾ ಟೆಸ್ಟ್) ಪಾಸಾಗಿ ಉದ್ಯೋಗದಲ್ಲಿ ಬಡ್ತಿ ಪಡೆಯಬಹುದು. ಐಟಿಐ ಪಾಸಾದ ವಿದ್ಯಾರ್ಥಿಗಳು ಪಾಲಿಟೆಕ್ನಿಕ್‌ಗಳಿಗೆ ಬಯಸಿದರೆ ಸೇರುವ ಅವಕಾಶವಿದೆ. ಮತ್ತು 1 ವರ್ಷದ ರಿಯಾಯಿತಿ ಇದೆ. ಅಲ್ಲಿ ಪಾಸಾದ ಬಳಿಕ ಕಾರ್ಖಾನೆಗಳಲ್ಲಿ ಬಡ್ತಿ ಖಚಿತವಾಗಿ ಸಿಗುತ್ತದೆ. ಅಲ್ಲದೆ ಆರ್ಥಿಕ ಸುಧಾರಣೆ ಆಗುತ್ತದೆ.

ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಅವರ ವಿದ್ಯಾಭ್ಯಾಸವನ್ನು ಮುಂದುವರಿಸಬಹುದು. ಇಂಜಿನಿಯರಿಂಗ್ ಕಾಲೇಜುಗಳಲ್ಲಿ 2 ನೇ ವರ್ಷಕ್ಕೆ ಸೇರಲು ಅವಕಾಶವಿರುತ್ತದೆ. ಮತ್ತು ಅವರ ತಂದೆ ತಾಯಿಗಳ ಕನಸನ್ನು ಪೂರ್ಣಗೊಳಿಸಿ ಕೃತಾರ್ಥರಾಗಬಹುದು.

ಹೀಗೆ ಈ ಎಲ್ಲಾ ಅವಕಾಶಗಳು ಕೇವಲ ಎಸ್‌ಎಸ್‌ಎಲ್‌ಸಿ ಪಾಸಾದ ವಿದ್ಯಾರ್ಥಿಗಳಿಗೆ ಸಿಗುವುದು ಈ ಕೋರ್ಸ್‌ನ ವಿಶೇಷ. 2 ವರ್ಷ ಪಿಯುಸಿ, 4 ವರ್ಷ ಇಂಜಿನಿಯರಿಂಗ್ ಕೋರ್ಸ್ ಮಾಡದೇ ಐಟಿಐನಲ್ಲಿ 2 ವರ್ಷ, ಪಾಲಿಟೆಕ್ನಿಕ್‌ನಲ್ಲಿ 2 ವರ್ಷ ಮತ್ತು ಇಂಜಿನಿಯರಿಂಗ್ ಕಾಲೇಜಿನಲ್ಲಿ 2 ವರ್ಷಗಳಲ್ಲಿ ಅಭ್ಯಾಸ ಮಾಡಿದರೆ ಸಂಪೂರ್ಣ ಇಂಜಿನಿಯರ್ ಆಗಬಹುದು.

ನಾನು ಪ್ರಾಂಶುಪಾಲ ಆಗಿದ್ದ ಸಮಯದಲ್ಲಿ ಹಲವಾರು ವಿದ್ಯಾರ್ಥಿಗಳು ಈ ಅವಕಾಶಗಳನ್ನು ಪಡೆದು ದೇಶ ವಿದೇಶಗಳಲ್ಲಿ ಪರಿಣಿತರಾಗಿ ನೆಲೆಸಿದ್ದಾರೆ. ಡೈರೆಕ್ಟರೇಟ್ ಆಫ್ ಎಂಪ್ಲಾಯಿಮೆಂಟ್ ಟ್ರೈನಿಂಗ್ ಗವರ್ನಮೆಂಟ್ ಆಫ್ ಇಂಡಿಯಾದವರು ಐಟಿಐಗಳನ್ನು ಸ್ಥಾಪಿಸಲು ಉತ್ತೇಜಿಸುತ್ತಾರೆ. ನಮ್ಮ ರಾಜ್ಯದಲ್ಲಿ ಸುಮಾರು 60 ಸರಕಾರಿ ಐಟಿಐಗಳು ಹಾಗೂ ಸುಮಾರು 300 ಖಾಸಗಿ ಐಟಿಐಗಳು ಇವೆ. ಸರಕಾರಿ ಐಟಿಐಯಲ್ಲಿ ಇರುವ ಅನುಕೂಲತೆಗಳು, ಸೌಲಭ್ಯಗಳು ಖಾಸಗಿ ಐಟಿಐಗಳಿಗೂ ಲಭಿಸುತ್ತವೆ. ಧಾರವಾಡ ಜಿಲ್ಲೆಯಲ್ಲಿ ಸುಮಾರು 21 ಖಾಸಗಿ ಐಟಿಐಗಳನ್ನು ಸ್ಥಾಪಿಸಲು ಅನುಕೂಲ ಮಾಡಿಕೊಟ್ಟ ನನಗೆ ತುಂಬಾ ಹೆಮ್ಮೆ ಇದೆ. ನಮ್ಮ ಸಂಘ ಸಂಸ್ಥೆಗಳು ಐಟಿಐಗಳನ್ನು ಪ್ರಾರಂಭಿಸಿ ಬಡಮಕ್ಕಳಿಗೆ ಉದ್ಯೋಗ ಕೊಡಿಸಿ ಕೃತಾರ್ಥರಾಗಬೇಕಾಗಿ ವಿನಂತಿಸುತ್ತೇನೆ. ಹಾಗೂ ಅವರ ಆರ್ಥಿಕತೆ ಸುಧಾರಿಸಲು ಸಹಕರಿಸುವಂತೆ ಆಶಿಸುತ್ತೇನೆ.

ಲೇಖಕರು ಹುಬ್ಬಳ್ಳಿಯ ಸರಕಾರಿ ಐಟಿಐ ಕಾಲೇಜಿನ ನಿವೃತ್ತ ಪ್ರಾಂಶುಪಾಲರು ಹಾಗೂ ನಮ್ಮ ಸಮಾಜದ ಅತ್ಯಂತ ಹಿರಿಯ ಇಂಜಿನಿಯರ್ ಪದವೀಧರರು.

## ಸಂಪತ್ ಕುಮಾರ್‌ಗೆ ಡಾಕ್ಟರೇಟ್



ಮಣಿಪಾಲ ತಾಂತ್ರಿಕ ಮಹಾವಿದ್ಯಾಲಯದ ವಿದ್ಯುನ್ಮಾನ ಮತ್ತು ಸಂಪರ್ಕ ವಿಭಾಗದಲ್ಲಿ ಹಿರಿಯ ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಸಂಪತ್ ಕುಮಾರ್ ಅವರಿಗೆ "ಎಕ್ಸ್–ರೇ ಚಿತ್ರಗಳ 3ಡಿ ರಚನೆಯ ಮೂಲಕ ಬೆನ್ನುಮೂಳೆಯ ನ್ಯೂನತೆಗಳ ಮಾಪನ" ಎಂಬ ಪ್ರೌಢ ಪ್ರಬಂಧಕ್ಕೆ ಮಣಿಪಾಲ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ. ಬೆನ್ನುಮೂಳೆಯ ರೋಗ ಹೊಂದಿರುವವರ ತಪಾಸಣೆಗೆ ಸಿಟಿ ಸ್ಕ್ಯಾನ್ ಅಥವಾ ಎಮ್‌ಆರ್‌ಐ ಅಂತಹ ದುಬಾರಿಯಾದ, ಅಲ್ಲದೇ ಅಪಾಯಕಾರಿ ಯಾದ ತಂತ್ರಜ್ಞಾನದ ಬದಲು ಕಡಿಮೆ ವೆಚ್ಚದ ಸಾಧನವನ್ನು ಈ ಮೂಲಕ ಅಭಿವೃದ್ಧಿ ಪಡಿಸಲಾಗಿದೆ. ಈ ಅಧ್ಯಯನಕ್ಕೆ ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಂಶೋಧನಾ ಕೇಂದ್ರ (SERB-DST)ದಿಂದ ರೂ.10.26 ಲಕ್ಷ ಅನುದಾನವೂ ದೊರಕಿರುತ್ತದೆ. ಇವರು ಅಂತಾರಾಷ್ಟ್ರೀಯ ಮಟ್ಟದ ತಂತ್ರಜ್ಞಾನ ಪತ್ರಿಕೆಗಳಲ್ಲಿ 16ಕ್ಕೂ ಅಧಿಕ ಸಂಶೋಧನಾ ಲೇಖನಗಳನ್ನು ಬರೆದಿರುತ್ತಾರೆ. ಎಂ.ಐ.ಟಿ.ಯ ಪ್ರಾಧ್ಯಾಪಕರಾದ ಡಾ. ಪ್ರಭಾಕರ ನಾಯಕ್ ಮತ್ತು ಡಾ.ಕೆ.ಎಸ್.ಹರೀಶ್ ಅವರ ಮಾರ್ಗದರ್ಶನದಲ್ಲಿ ಈ ಪ್ರಬಂಧ ಮಂಡನೆಯಾಗಿರುತ್ತದೆ. ಇವರು ಕುಂಭಾಸಿಯ ರವೀಂದ್ರ ರಾವ್ ಹಾಗೂ ಕುಮುದ್ವತಿ ದಂಪತಿಗಳ ಸುಪುತ್ರರಾಗಿದ್ದಾರೆ.

## ಪುತ್ತೂರುಮುರದಲ್ಲಿ ಹಿರಿಯ ನಾಗರಿಕರ ಹಾಗೂ ವಿದ್ಯಾರ್ಥಿನಿಲಯದ ಉದ್ಘಾಟನೆ



ಪುತ್ತೂರು ಮುರದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರು ನೂತನವಾಗಿ ಆರಂಭಿಸಿರುವ ಪುರುಷರ ವೃದ್ಧಾಶ್ರಮ ಹಾಗೂ ವಿದ್ಯಾರ್ಥಿನಿಲಯದ ಉದ್ಘಾಟನೆ ತಾ.01–05–2017ರಂದು ನೆರವೇರಿತು.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಅಷ್ಟೋತ್ತರ ಶತನಾಮ ಪಾರಾಯಣ



ಶ್ರೀ ಶಂಕರಜಯಂತಿಯ ಪ್ರಯುಕ್ತ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರಿನಲ್ಲಿ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞ ತಾ.30–04–2017ರಂದು ನೆರವೇರಿತು. ಸುಮಾರು 60 ಜನ ಸಮಾಜಬಾಂಧವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಪಾವಂಜೆಯಲ್ಲಿ ಉತ್ಸವ

ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ ಪಾವಂಜೆಯ ವರ್ಷಾವಧಿ ಜಾತ್ರಾ ಮಹೋತ್ಸವವು ಹಾಗೂ ಮಹಾರಥೋತ್ಸವವು ತಾ.13–04–2017 ರಿಂದ ತಾ.19–04–2017ರ ತನಕ ನೆರವೇರಿತು.


ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯೆಸ್ಸೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ-ಮೇಲ್ : udayarao42@gmail.com

Gift Item • Stationary • Xerox • Lamination
Spiral Binding • Mobile & DTC Recharge • Tours & Travels
Courier Service • Sports Items & Toys • Ice Creams






ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಬೆಳ್ತಂಗಡಿಯಲ್ಲಿ ಸುಬ್ರಹ್ಮಣ್ಯ ಹೋಮ



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಬೆಳ್ತಂಗಡಿ ಇದರ ಆಶ್ರಯದಲ್ಲಿ ಬೆಳ್ತಂಗಡಿಯ ಸಮಾಜಬಾಂಧವರು ಲಾಯಿಲದಲ್ಲಿರುವ ಸುಬ್ರಹ್ಮಣ್ಯ ಸಭಾಭವನದಲ್ಲಿ ಶ್ರೀ ಸುಬ್ರಹ್ಮಣ್ಯ ಹೋಮವನ್ನು ವೇದಮೂರ್ತಿ ಜಗದೀಶ ಭಟ್ಟರ ನೇತೃತ್ವದಲ್ಲಿ ತಾ.23–04–2017ರಂದು ನೆರವೇರಿಸಿದರು. ಹಿಂದಿನ ದಿನ ಸಂಜೆ ಬೆಳ್ತಂಗಡಿಯ ಸಮಾಜಬಾಂಧವರು ಸುಬ್ರಹ್ಮಣ್ಯ ಜಪವನ್ನು ಪೂರೈಸಿದ್ದರು. ಬೆಳಗ್ಗೆ 11 ಗಂಟೆಗೆ ಪೂರ್ಣಾಹುತಿಯಾಗಿ ಪ್ರಸಾದಭೋಜನದೊಂದಿಗೆ ಕಾರ್ಯಕ್ರಮ ಯಶಸ್ವಿಯಾಯಿತು.

## ವಿದೇಶ ಪ್ರಯಾಣ



ಶ್ರೀ ಶಾರದಾ ಪತ್ರಿಕೆಯ ಮಹಾಪೋಷಕರಾದ ಶ್ರೀ ಮರೂರು ನಾರಾಯಣ ಹೆಬ್ಬಾರ್ ರವರು ತಮ್ಮ ಧರ್ಮಪತ್ನಿ ಶ್ರೀಮತಿ ವೇದಾವತಿಯವರೊಂದಿಗೆ ಅಮೆರಿಕಾ ಪ್ರವಾಸ ಕೈಗೊಂಡಿದ್ದಾರೆ. ಅವರು ಅಮೇರಿಕಾದಲ್ಲಿ ನೆಲೆಸಿರುವ ತಮ್ಮ ಪುತ್ರನನ್ನು ಕೂಡಲಿದ್ದಾರೆ. ಅವರ ಪ್ರಯಾಣ ಸುಖಕರವಾಗಿರಲೆಂದು ಹಾಗೂ ಅವರು ತಮ್ಮ ಅನುಭವಗಳನ್ನು ಹೊತ್ತುತಂದು ನಮ್ಮ ಓದುಗರಿಗೆ ಹಂಚಲೆಂದು ಹಾರೈಸುತ್ತೇವೆ.

## ನರಸಿಂಹ ಜಯಂತಿ

ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ತಾ.09–05–2017ರಂದು ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ನರಸಿಂಹ ಜಯಂತಿಯನ್ನು ಆಚರಿಸಲಾಯಿತು. ಬೆಳಿಗ್ಗೆ ಕಲಶಾಭಿಷೇಕ, ಮಧ್ಯಾಹ್ನ ಮಹಾಪೂಜೆ, ಸಂಜೆ ರಂಗಪೂಜೆ ನೆರವೇರಿತು.




ಎಮ್. ದೇವಾನಂದ್ ಭಟ್ Cell : 9845644556
9483913344

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

ವೇದಮೂರ್ತಿ ಚಿದಾನಂದ ಭಟ್

#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560010

ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

ಮೊಬೈಲ್– 9886629697, 9986119865


## ಸಾವಿತ್ರಿ ಮನೋಹರ್ ರವರಿಗೆ ಸನ್ಮಾನ



ಕಾರ್ಕಳದ ನಿವೃತ್ತ ಶಿಕ್ಷಕಿ, ಸಂಪನ್ಮೂಲ ವ್ಯಕ್ತಿ, ಕವಯಿತ್ರಿ, ಸಾವಿತ್ರಿ ಮನೋಹರ್‌ರವರನ್ನು ತಾ.23–04–2017ರಂದು ಗೋವಾದಲ್ಲಿ ನಡೆದ ಕನ್ನಡ ಕನ್ನಡಿಗರ 9ನೇ ಸಾಂಸ್ಕೃತಿಕ ಸಮ್ಮೇಳನದಲ್ಲಿ ಕರುನಾಡ ಪದ್ಮಶ್ರೀ ಪ್ರಶಸ್ತಿಯೊಂದಿಗೆ ಸನ್ಮಾನಿಸಿದರು.

## ಗೋಶಾಲೆಗೆ ದಾನ



ಶ್ರೀಶಾರದಾ ಪತ್ರಿಕೆಯ ಮಹಾಪೋಷಕರಾದ ಬಿ.ಜಯರಾಮ ರಾಯರ ಪುತ್ರ ಅಯರ್ಲೆಂಡಿನಲ್ಲಿರುವ ಶ್ರೀ ಸೌರಭ್ ರಾವ್ ತನ್ನ ಜನ್ಮದಿನದ ಪ್ರಯುಕ್ತ ನೀಲಾವರದ ಗೋಶಾಲೆಗೆ ರೂ.21,000/– ಮೌಲ್ಯದ ಹಸಿರು ಹುಲ್ಲನ್ನು ದಾನವಾಗಿತ್ತರು


ಶ್ರೀ ಮಾತಾ ಜ್ಯೋತಿಷ್ಯಾಲಯ
ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)

Buying and selling shares
as easy as checking your emails

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)




SAMPATH KUMAR
Mobile : 9741508881
8884873233

TRISHULINI TOURIST
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

## ಶುಭ ವಿವಾಹ

ಡಾನಯನಾ ಹಾಗೂ ಡಾಸತೀಶ್ ಸಜೆ ಇವರ ಪುತ್ರ **ಸಿದ್ಧಾರ್ಥ** ಹಾಗೂ ಶ್ರೀಮತಿ ಶಾಂತಾ ಮತ್ತು ಶ್ರೀ ವಾಸುದೇವ ಬೆಂಗಳೂರು ಇವರ ಪುತ್ರಿ **ಕಾವ್ಯಾ** ಇವರ ವಿವಾಹವು 19-04-2017ನೇ ಬುಧವಾರ ಬೆಂಗಳೂರಿನ ಪ್ರಸನ್ನ ಕಲ್ಯಾಣಮಂಟಪದಲ್ಲಿ ನೆರವೇರಿತು.

**** ****

ಶಿವಮೊಗ್ಗದ ಶ್ರೀಮತಿ ಮಂಜುಳಾ ಮತ್ತು ಶ್ರೀ ಎಂ.ಆರ್.ಮಂಜುನಾಥ ಇವರ ಪುತ್ರ **ಪ್ರಮೋದ್** ಹಾಗೂ ಶ್ರೀಮತಿ ಪ್ರತಿಭಾ ಮತ್ತು ಕರ್ವಾಲು ನವೀನ್ ಕುಮಾರ್ ಇವರ ಪುತ್ರಿ **ನವ್ಯಾ** ಇವರ ವಿವಾಹವು 21-4-2017ರಂದು ಕಾರ್ಕಳದ ಶ್ರೀ ರಾಧಾಕೃಷ್ಣ ಸಭಾಭವನದಲ್ಲಿ ನೆರವೇರಿತು.

**** ****

ಶ್ರೀಮತಿ ಕಲ್ಪನಾ ಹಾಗೂ ಹೆಜಮಾಡಿ ರೋಹಿತ್ ಕುಮಾರ್ ಇವರ ಪುತ್ರಿ **ಡಾ| ಕ್ಷಮಾ** ಹಾಗೂ ಶ್ರೀಮತಿ ಹೇಮಲತಾ ಮತ್ತು ಡಾ| ವಸಂತ ರಾವ್ ಬೆಂಗಳೂರು ಇವರ ಪುತ್ರ **ಡಾ| ಅನೂಪ್** ಇವರ ವಿವಾಹವು ತಾ.10-04-2017ನೇ ಸೋಮವಾರ ಮಂಗಳೂರಿನ ಸಂಘನಿಕೇತನದಲ್ಲಿ ನೆರವೇರಿತು

**** ****

ಶ್ರೀಮತಿ ಕವನಾ ಮತ್ತು ಶ್ರೀ ಕುಮಾರ ಸ್ವಾಮಿ ಅಜ್ಜಾವರ ಇವರ ಪುತ್ರಿ **ನವ್ಯ** ಮತ್ತು ಶ್ರೀಮತಿ ಭಾರತಿ ಮತ್ತು ಪಡುಬಿದ್ರಿ ಮಾಧವರಾವ್ ಇವರ ಪುತ್ರ **ವಿಷ್ಣುತಿಲಕ** ಇವರ ವಿವಾಹವು ತಾ.19-04-2017ರಂದು ಪಡುಬಿದ್ರಿ ಖಡ್ಗೇಶ್ವರಿ ಕಲ್ಯಾಣ ಮಂಟಪದಲ್ಲಿ ನೆರವೇರಿತು.

**** ****

ಶ್ರೀಮತಿ ಕಲಾವತಿ ಮತ್ತು ಪರಾರಿ ವಿದ್ಯಾಪತಿ ರಾವ್ ಇವರ ಪುತ್ರ **ವಿಕ್ರಮಕುಮಾರ್** ಹಾಗೂ ಶ್ರೀಮತಿ ಜಾನಕಿ ಮತ್ತು ಸೀತಾರಾಮ ಪುರೋಹಿತ್ ಇವರ ಪುತ್ರಿ **ರೋಹಿಣಿ** ಇವರ ವಿವಾಹವು ತಾ.10-04-2017ರಂದು ರಾಯಚೂರಿನ ರಾಘವೇಂದ್ರ ಸ್ವಾಮಿ ಕಲ್ಯಾಣಮಂಟಪದಲ್ಲಿ ನೆರವೇರಿತು.

## ಜನನ

ಶ್ರೀಮತಿ ಸಿಂಧೂರ ಹಾಗೂ ಶ್ರೀ ಹರ್ಷ ದಂಪತಿಗಳಿಗೆ ತಾ.21-03-2017ರಂದು ಹೆಣ್ಣುಮಗುವಿನ ಜನನವಾಗಿರುತ್ತದೆ.

## ಉಪನಯನ

**ಚಿ| ಅನಂತ್**

ಬ್ರಹ್ಮಾವರ ಬೈಕಾಡಿ ಡಾ| ಅನಿಲ್ ಕುಮಾರ್ ಮತ್ತು ಡಾ| ಪ್ರಸನ್ನ ದಂಪತಿಗಳ ಪುತ್ರ ಅನಂತ್‌ನ ಬ್ರಹ್ಮೋಪದೇಶ ಸಮಾರಂಭವು ತಾ.19-04-2017ರಂದು ಬೈಕಾಡಿ ಕಾಮೇಶ್ವರದಲ್ಲಿರುವ ಅವರ ಸ್ವಗೃಹದಲ್ಲಿ ನೆರವೇರಿತು.

**** ****

**ಚಿ| ಅಂಶ್**

ಮುಂಬಯಿಯ ಶ್ರೀಮತಿ ಅನಿತಾ ಮತ್ತು ಶ್ರೀ ಶಿರಿಶ್ ರಾವ್ ಇವರ ಪುತ್ರ ಅಂಶ್‌ನ ಬ್ರಹ್ಮೋಪದೇಶ ಸಮಾರಂಭವು ತಾ.1-5-2017 ರಂದು ನೆರುಲ್ ನವೀಮುಂಬಯಿಯ ಸೋಮೇಶ್ವರ ಹಾಲ್‌ನಲ್ಲಿ ನೆರವೇರಿತು.

**** ****

**ಚಿ| ಪ್ರಜ್ವಲ್**

ಮಡಿಕೇರಿ ಶ್ರೀಮತಿ ಪ್ರಮೀಳ ಮತ್ತು ಶ್ರೀ ಸುರೇಶ್ ಕುಮಾರ ಇವರ ಪುತ್ರ ಪ್ರಜ್ವಲ್‌ನ ಬ್ರಹ್ಮೋಪದೇಶ ಸಮಾರಂಭವು ಮಡಿಕೇರಿಯ ಓಂಕಾರ ಸದನದಲ್ಲಿ ತಾ.08-05-2017ರಂದು ನೆರವೇರಿತು.

## ಗೃಹಪ್ರವೇಶ

ಡಾ|ಎಂ.ವಿ ಕಾರ್ತಿಕ್ ಹಾಗೂ ಶ್ರೀಮತಿ ಡಾ| ಶ್ರೇಯಶ್ರೀ ಕಾರ್ತಿಕ್ ಮಂಗಳೂರಿನ ಕೊಟ್ಟಾರದಲ್ಲಿ ನೂತನವಾಗಿ ನಿರ್ಮಿಸಿದ ಗೃಹ ಶ್ರೀ ಸಾಯಿ ಗಣೇಶ್ ಇದರ ಪ್ರವೇಶೋತ್ಸವ ವನ್ನು ತಾ.29-04-2017ರಂದು ನೆರವೇರಿಸಿದರು.

**** ****

ಕುಂಜಾರುಗಿರಿ ಪಡುಬೆಳ್ಳೆ ಶ್ರೀ ಸತ್ಯನಾರಾಯಣ ರಾವ್ ಹಾಗೂ ಶ್ರೀಮತಿ ಸುಧಾ ದಂಪತಿಗಳು ತಾವು ನೂತನವಾಗಿ ಕಟ್ಟಿಸಿರುವ ಮನೆ "ಸತ್ಯಸುಧಾ" ಇದರ ಗೃಹಪ್ರವೇಶವನ್ನು ತಾ.20-04-2017ರಂದು ನೆರವೇರಿಸಿದರು.

## ಉಗ್ರರಥ ಶಾಂತಿ

ಕಟಪಾಡಿ ಮೂಡಬೆಟ್ಟು ಶ್ರೀ ಉಮೇಶ ರಾಯರು ತಮ್ಮ 60ನೆಯ ಹುಟ್ಟುಹಬ್ಬವನ್ನು ತಮ್ಮ ಧರ್ಮಪತ್ನಿ ಶ್ರೀಮತಿ ಪ್ರಜ್ವಲಾ ಹಾಗೂ ಕುಟುಂಬಸ್ಥರೊಂದಿಗೆ ಉಗ್ರರಥ ಶಾಂತಿ ಯೊಂದಿಗೆ ತಾ.16-04-2017ರಂದು ಶ್ರೀ ಶಾರದಾಮಂಟಪದಲ್ಲಿ ಆಚರಿಸಿದರು.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ }

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ

**ತಾ.14-05-2017 ಮತ್ತು 13-06-2017 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.10-06-2017 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.16-05-2017, ತಾ.30-05-2017 ಮತ್ತು ತಾ.14-06-2017 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ನಿಧನ

ದಿವಂಗತ ತಾಳಿಪಾಡಿ ಶಿವರಾಮ ಶಾಸ್ತ್ರಿಯವರ ಧರ್ಮಪತ್ನಿ ಶ್ರೀಮತಿ ಶಾಂತಾಶಾಸ್ತ್ರಿಯವರು ತಾ.15-4-2017ರಂದು ಬೆಂಗಳೂರಿನಲ್ಲಿ ನಿಧನಹೊಂದಿದರು

**** ****

ದಿ| ಸಾಂತೂರು ಪ್ರಭಾಕರರಾವ್ ಇವರ ಧರ್ಮಪತ್ನಿ ಶ್ರೀಮತಿ ಲೀಲಾವತಿ ಇವರು ತಾ.19-04-2017ರಂದು ನಿಧನಹೊಂದಿದರು

**** ****

ಬಂಟಕಲ್ ಹೇರೂರು ನಿವಾಸಿ ಶ್ರೀ ಎಂ. ಶ್ರೀನಿವಾಸ ರಾಯರು ತಾ.22-4-2017ರಂದು ನಿಧನಹೊಂದಿದರು

## ಬೆಂಗಳೂರಿನಲ್ಲಿ ವಧೂವರರ ಸಮಾವೇಶ

ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ, ಬೆಂಗಳೂರು ಇದರ ವಾರ್ಷಿಕೋತ್ಸವದ ಅಂಗವಾಗಿ ತಾ.04-06-2017ರಂದು ಬೆಂಗಳೂರಿನಲ್ಲಿ ವಧೂವರರ ಸಮಾವೇಶವನ್ನು ಏರ್ಪಡಿಸಲಾಗುತ್ತಿದೆ. ಈ ಸಮಾವೇಶಕ್ಕೆ ನಮ್ಮ ಸಮಾಜದ ಎಲ್ಲಾ ಪ್ರದೇಶದ ವಧೂವರರು ಭಾಗವಹಿಸಲು ಅವಕಾಶ ಮಾಡಿಕೊಡಲಾಗಿದೆ . ಬೆಂಗಳೂರಿನಿಂದ ಹೊರಗಿನ ಪ್ರದೇಶದಿಂದ ಬರುವವರಿಗೆ ವಸತಿ ವ್ಯವಸ್ಥೆ ಮಾಡಿಕೊಡಲಾಗುವುದು. ಸಮಾಜಬಾಂಧವರು ಈ ಅವಕಾಶದ ಸದುಪಯೋಗವನ್ನು ಮಾಡಿಕೊಳ್ಳಬೇಕಾಗಿ ವಿನಂತಿ.

**ಮಾಹಿತಿಗಾಗಿ ಸಂಪರ್ಕಿಸಿ : ಶ್ರೀ ಎ. ಶಿವರಾವ್ (9880570747), ಶ್ರೀಮತಿ ಪಿ. ಮಾಲತಿ ರಾವ್ (9886924913), ಶ್ರೀಮತಿ ಬಿ.ವಿದ್ಯಾ ರಾವ್ (9731015176)**

## ಶ್ರೀಶಾರದಾ ವೇದಿಕೆ - ಪ್ರಕಟಣೆ

**ಪತ್ರಿಕೆಯ ವಿಳಾಸ : ಸಂಪಾದಕರು, ಶ್ರೀ ಶಾರದ ಪತ್ರಿಕೆ, ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102.**

ಇ-ಮೇಯ್ಲ್ : srisharadaudupi@gmail.com

ವೆಬ್‌ಸೈಟ್ : www.srisharada.org ವಾಟ್ಸ್ ಆ್ಯಪ್ ನಂಬ್ರ : 9845136322

ಶಾರದ ಮಂಟಪದ ಮ್ಯಾನೇಜರ್ : 0820-2520754, 9448108920

## ಶ್ರೀಶಾರದಾ ವೇದಿಕೆಗೆ ಸದಸ್ಯತನ ಶುಲ್ಕ

ಆಜೀವ ಸದಸ್ಯರು : ರೂ.500/-, ದಾನಿಗಳು : ರೂ.1000/-,
ಪೋಷಕರು : ರೂ.5000/-, ಮಹಾಪೋಷಕರು : ರೂ.10000/-

**ಜಾಹೀರಾತುದರ**

| | | |
|---|---|---|
| ಕಲರ್ ಪುಟದ 1/3ನೇ ಭಾಗ 12 ತಿಂಗಳುಗಳಿಗೆ | : | ರೂ.12000/- |
| ಕಲರ್ ಪುಟದ 1/8ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದುಬಾರಿಗೆ | : | ರೂ.1000/- |
| ಕಪ್ಪು ಬಿಳುಪು ಪುಟದ 1/8ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದು ಬಾರಿಗೆ | : | ರೂ.500/- |
| ಕಪ್ಪು ಬಿಳುಪು ಪುಟದ 2 ಇಂಚು 2 ಕಾಲಂ 12 ತಿಂಗಳುಗಳಿಗೆ | : | ರೂ.1500/- |

ಈ ಶುಲ್ಕವನ್ನು ತಮ್ಮ ಹೆಸರು ವಿಳಾಸದೊಂದಿಗೆ, ನಗದು, ಚೆಕ್ ಅಥವಾ ಡಿ.ಡಿ. ಮುಖಾಂತರ ಸಲ್ಲಿಸಬಹುದು ಅಥವಾ ಕರ್ನಾಟಕ ಬ್ಯಾಂಕ್, ಕುಂಜಿಬೆಟ್ಟು ಬ್ರಾಂಚ್, ಬ್ಯಾಂಕಿನ ಖಾತೆಗೆ ನೇರವಾಗಿ ಜಮಾ ಮಾಡಿ ಅದರ ರಶೀದಿಯನ್ನು ಮೇಲಿನ ನಮ್ಮ ಇ-ಮೇಯ್ಲ್/ವಾಟ್ಸ್‌ಆ್ಯಪ್ ವಿಳಾಸಕ್ಕೆ ಕಳುಹಿಸಬಹುದು. ಖಾತೆಯ ಹೆಸರು **ಶ್ರೀ ಶಾರದಾ ವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ, ಖಾತೆಸಂಖ್ಯೆ : 8032500102881601 at Karnataka Bank, Kunjibettu Branch, Udupi IFSC Code KARB0000803**

**ಸಮಾಜ ಬಾಂಧವರು ಪತ್ರಿಕೆಯನ್ನು ತುಂಬು ಹೃದಯದಿಂದ ಪ್ರೋತ್ಸಾಹಿಸುವಂತೆ ವಿನಂತಿ**





RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.

N. Laxmi Prasad
ಕಾರ್ಯಕಾರಿಣಿ ಮಂಡಳಿ ಸದಸ್ಯರು


D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

*With Best Complimemts From*
SRI M. SHAILESH RAO
B.E., Civil
Ph : 9448624324
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

## ಹೆಬ್ಬೂರು ಶ್ರೀ ಶ್ರೀ ಗಳ ಭೇಟಿ: ಸುವರ್ಣಮಹೋತ್ಸವಕ್ಕೆ ಆಹ್ವಾನ



ತಾ.28–05–2017ರಂದು ಶ್ರೀ ಶಾರದಾ ಮಂಟಪದಲ್ಲಿ ಜರಗಲಿರುವ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ), ಕುಂಜಿಬೆಟ್ಟು ಇದರ ಸುವರ್ಣಮಹೋತ್ಸವ ಸಮಾರಂಭಕ್ಕೆ ಆಗಮಿಸಿ ಆಶೀರ್ವಚನವಿತ್ತು ಸಮಾಜಬಾಂಧವರನ್ನು ಹರಸಬೇಕೆಂದು ವಿನಂತಿಸಿಕೊಳ್ಳಲು ಘನಪುರಿ ಸಂಸ್ಥಾನ ಶ್ರೀ ಕೋದಂಡಾಶ್ರಮ ಮಠ, ಹೆಬ್ಬೂರಿನ ಪೀಠಾಧಿಪತಿಗಳಾದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಗಳನ್ನು ಭೇಟಿಯಾಗಲು ಸಂಘದ ಅಧ್ಯಕ್ಷರಾದ ಶ್ರೀ ವೈ.ಭುವನೇಂದ್ರರಾಯರ ನೇತೃತ್ವದಲ್ಲಿ ತಾ.27–04–2017ರಂದು ಸಮಾಜಬಾಂಧವರು ತೆರಳಿ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿದರು. ಶ್ರೀ ಶ್ರೀ ಗಳು ಪ್ರೀತಿಪೂರ್ವಕವಾಗಿ ಕುಶಲೋಪರಿಗಳನ್ನು ವಿಚಾರಿಸಿ ನಮ್ಮ ವಿನಂತಿಯನ್ನು ಮನ್ನಿಸಿ ಕಾರ್ಯಕ್ರಮಕ್ಕೆ ಆಗಮಿಸುವುದಾಗಿ ಒಪ್ಪಿಗೆಯಿತ್ತರು. ಶ್ರೀ ಶ್ರೀಗಳ ಆಪ್ತಸಹಾಯಕರಾದ ಶ್ರೀ ಸುಬ್ರಹ್ಮಣ್ಯರಾಯರು ಉಪಸ್ಥಿತರಿದ್ದರು. ಶ್ರೀ ಶ್ರೀಗಳ ಭೇಟಿಯ ನಂತರ ಇತಿಹಾಸ ಪ್ರಸಿದ್ಧ ಶ್ರೀ ಕಾಮಾಕ್ಷಿ ಶಾರದಾಂಬಾ ದೇಗುಲದಲ್ಲಿ ಅರ್ಚನೆಯಿತ್ತು ಸಮಾಜಬಾಂಧವರು ಉಡುಪಿಗೆ ಹಿಂತಿರುಗಿದರು.




ಪುರಾತತ್ವ ಇಲಾಖೆಯ ವಶದಲ್ಲಿರುವ ಕಾಮಾಕ್ಷಿ ಶಾರದಾಂಬಾ ಹಳೆಯ ದೇವಸ್ಥಾನ

## ಶೃಂಗೇರಿ ಭೇಟಿ : ಸುವರ್ಣಮಹೋತ್ಸವದ ಯಶಸ್ಸಿಗಾಗಿ ಪ್ರಾರ್ಥನೆ



ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು ಉಡುಪಿ ಇದರ ಸುವರ್ಣಮಹೋತ್ಸವ ಕಾರ್ಯಕ್ರಮಗಳನ್ನು ಆರಂಭಿಸುವ ಮುನ್ನ ಶ್ರೀ ಶೃಂಗೇರಿಗೆ ಭೇಟಿ ನೀಡಿ ಶ್ರೀ ಶಾರದಾದೇವಿಗೆ ಅರ್ಚನೆ ಸಲ್ಲಿಸಿ, ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರನ್ನು ಹಾಗೂ ತತ್ಕರಕಮಲ ಸಂಜಾತ ಶ್ರೀ ಶ್ರೀ ವಿಧುಶೇಖರ ಭಾರತೀತೀರ್ಥ ಮಹಾಸ್ವಾಮಿಗಳವರಿಗೆ ಆಹ್ವಾನ ಪತ್ರವನ್ನು ತಲುಪಿಸಲು ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರರಾಯರ ನೇತೃತ್ವದಲ್ಲಿ ಸಮಾಜಬಾಂಧವರು ಶೃಂಗೇರಿಗೆ ತೆರಳಿದರು. ಶ್ರೀ ಶಾರದಾ ದೇವಸ್ಥಾನಕ್ಕೆ ಭೇಟಿಯಿತ್ತು ಪ್ರಾರ್ಥನೆ ಸಲ್ಲಿಸಿ ಪ್ರಸಾದ ಪಡೆದು ಗುರುಭವನಕ್ಕೆ ಭೇಟಿಯಿತ್ತು ತಮಿಳ್ನಾಡು ಯಾತ್ರೆಯಲ್ಲಿದ್ದ ಶ್ರೀ ಶ್ರೀ ಗಳವರಿಗೆ ಸಮಾರಂಭದ ಆಹ್ವಾನಪತ್ರಿಕೆಯನ್ನು ತಲುಪಿಸುವಂತೆ ಕೋರಿಕೊಂಡೆವು. ಪ್ರಸಾದ ಸ್ವೀಕರಿಸಿ ಹಿಂತಿರುಗಿದೆವು.

## ಶ್ರೀ ಸೋಮನಾಥ ದೇವಸ್ಥಾನ ಚಿರುಗೋಳಿಯಲ್ಲಿ ಪುನರ್ ಪ್ರತಿಷ್ಠೆ



600 ವರ್ಷಗಳಿಂದ ಉಪ್ಪಳದಲ್ಲಿ ನೆಲೆಸಿರುವ ಉಬರಳೆ ಕುಟುಂಬದ ಇನ್ನೊಂದು ಕವಲು ಚೆಂಡುಕಳ ಮನೆತನ. ಶ್ರೀ ದೇವಿಯು ಚೆಂಡಾಡುವ ಸ್ಥಳದಲ್ಲಿ ನೆಲೆಸಿದವರು ಎಂದು ಇದರ ಅರ್ಥವಂತೆ. ಈ ಮನೆತನದವರು ಶ್ರೀ ಸೋಮನಾಥ ದೇವಸ್ಥಾನವನ್ನು ಪ್ರತಿಷ್ಠಾಪಿಸಿದವರು. ಈ ಮನೆತನದವರು ಸ್ಥಾಪಿಸಿದ್ದ ಶ್ರೀ ಸದಾಶಿವ ದೇವಸ್ಥಾನವೂ ಅಲ್ಲಿದ್ದು ಈಗ ಗ್ರಾಮಸಮಿತಿಯ ಅಧೀನದಲ್ಲಿದೆ. ಕಾಲಾಂತರದಿಂದ ಜೀರ್ಣಾವಸ್ಥೆಯಲ್ಲಿದ್ದ ಸೋಮನಾಥ ದೇವಳವನ್ನು ಚೆಂಡುಕಳ ಮನೆತನದವರು ಡಾ। ಚೆಂಡುಕಳ ರಮೇಶರಾಯರ ಗೌರವಾಧ್ಯಕ್ಷತನದಲ್ಲಿ ಜೀರ್ಣೋದ್ಧಾರಗೊಳಿಸಿ ಪುನಪ್ರತಿಷ್ಠೆ–ಬ್ರಹ್ಮಕುಂಭಾಭಿಷೇಕವನ್ನು ವಿಜೃಂಭಣೆಯಿಂದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ತಾ.19–04–2017ರಿಂದ ತಾ.24–04–2017ರ ತನಕ ಸಕಲ ಧಾರ್ಮಿಕ ವಿಧಿವಿಧಾನಗಳೊಂದಿಗೆ ನೆರವೇರಿಸಿದರು.


## ಶುಭಾಶಯಗಳು



**ಶ್ರೀ ಎನ್.ಪದ್ಮರಾಜ್ ಮತ್ತು ಶ್ರೀಮತಿ ಸುಮತಿ ಪದ್ಮರಾಜ್**

'ಸಾವಿತ್ರಿ', ಮಹಾಲಿಂಗೇಶ್ವರ ದೇವಸ್ಥಾನದ ಬಳಿ, ಬೀಚ್ ರಸ್ತೆ, ಪಡುಬಿದ್ರಿ–574111.

ಸುಮಧುರ ದಾಂಪತ್ಯ ಜೀವನದ 60 ಮಧುರ ಸಂವತ್ಸರಗಳನ್ನು ಹಾಲ್ಜೇನಿನಂತೆ ಕಳೆದು ಆದರ್ಶ ದಂಪತಿಗಳಾಗಿ ಬಾಳಿದ ನಿಮಗೆ ಭಗವಂತನು ಆಯುರಾರೋಗ್ಯ, ಸುಖ, ಸಮೃದ್ಧಿಗಳನ್ನು ಕರುಣಿಸಲೆಂದು ಪ್ರಾರ್ಥಿಸಿ ಶುಭ ಹಾರೈಸುವ

ಡಾ। ಸುನಿಲ್ ರಾವ್ ಪದ್ಮರಾಜ್, ಎಂ.ಬಿ.ಬಿ.ಎಸ್., ಎಂ.ಡಿ (ಮಗ)
ಡಾ। ಶಾಲಿನಿ, ಎಂ.ಬಿ.ಬಿ.ಎಸ್. (ಸೊಸೆ)
ಶ್ರೀ ಸುದೇಶ್ ಕುಮಾರ್ ಪಿ., ಬಿ.ಇ.-ಮೆಕ್ಯಾನಿಕ್ (ಮಗ)
ಶ್ರೀಮತಿ ಪದ್ಮಶ್ರೀ, ಬಿ.ಇ.-ಆರ್ಕ್ (ಸೊಸೆ)
ಡಾ। ಸುಮಂಗಲ, ಎಂ.ಬಿ.ಬಿ.ಎಸ್. (ಮಗಳು)
ಡಾ। ಸುಧೀರ್ ರಾವ್ ಬಿ.ಕೆ., ಎಂ.ಬಿ.ಬಿ.ಎಸ್., ಡಿ.ಆರ್ಥೋ (ಅಳಿಯ)
ಪ್ರೀತಮ್ ರಾವ್, ಬಿ.ಇ, ಎಂ.ಇ. (ಯು.ಎಸ್.ಎ.), ಡಾ। ಮೇಘನಾ, ಎಂ.ಬಿ.ಬಿ.ಎಸ್., ಡಾ। ಸುಪ್ರಿತಾ, ಎಂ.ಬಿ.ಬಿ.ಎಸ್.
ಡಾ। ಸುಶಾಂತ್, ಎಂ.ಬಿ.ಬಿ.ಎಸ್., ರಿಶಬ್ (ಮೊಮ್ಮಕ್ಕಳು)
ದುರ್ಗಿ ವಂಶಸ್ಥರು ಹಾಗೂ ಬಂಧುಬಳಗದವರು

## ಶುಭಾಶಯಗಳು



**ಶ್ರೀಮತಿ ಶಾಂತಾ ವಿ. ರಾವ್ ಮತ್ತು ಶ್ರೀ ಕೆ.ವೆಂಕಟರಮಣ ರಾವ್**

**ಮೂಡಬೆಟ್ಟು, ಕಟಪಾಡಿ.**

ಪೂಜ್ಯರೇ,

ಕಟಪಾಡಿ ಮೂಡಬೆಟ್ಟು ದಿ। ಆನಂದರಾವ್ ಮತ್ತು ದಿ। ಲಕ್ಷ್ಮೀ ಅಮ್ಮ ದಂಪತಿಗಳ ಸುಪುತ್ರರಾಗಿ ಜನಿಸಿದ ತಾವು ತಮ್ಮ ಶ್ರಮದ ದುಡಿಮೆಯಿಂದ ಮಹಾರಾಷ್ಟ್ರದಲ್ಲಿ ಹೊಟೇಲು ಉದ್ಯಮದಲ್ಲಿ ಪ್ರಗತಿ ಸಾಧಿಸಿ, ನಮ್ಮೆಲ್ಲರ ಜೀವನಕ್ಕೆ ಆದರ್ಶರಾಗಿರುತ್ತೀರಿ. ನಮಗೆ ಬದುಕಲು ಮಾರ್ಗದರ್ಶಕರಾಗಿ, ದಾರಿದೀಪಗಳಂತೆ ನಮ್ಮನ್ನು ಮುನ್ನಡೆಸಿ, ಹಾಲು–ಜೇನಿನಂತೆ ಬೆರೆತು ಸಾಗಿದ ಈ ನಿಮ್ಮುಭಯರ ಜೀವನದ ಗಾಲಿಯು ಇನ್ನಷ್ಟು ಮುನ್ನಡೆದು, ಸದಾ ಶ್ರೀಗಂಧದಂತೆ ನಮ್ಮೆಲ್ಲರ ಬದುಕಿಗೆ ಪರಿಮಳವನ್ನು ಸೂಸಲಿ ಎಂದು ದಿನಾಂಕ 17–05–2017ರಂದು ವೈವಾಹಿಕ ಜೀವನದ ಸುವರ್ಣ ಸಮಾರಂಭವನ್ನಾಚರಿಸುವ ಈ ಶುಭ ಸಂದರ್ಭದಲ್ಲಿ ಶ್ರೀ ದೇವರಲ್ಲಿ ಪ್ರಾರ್ಥಿಸುವ,


ಶ್ರೀಮತಿ ಪ್ರಜ್ವಲಾ ಯು.ರಾವ್ ಮತ್ತು ಶ್ರೀ ಉಮೇಶ್ ರಾವ್ (ತಮ್ಮ)
ಶ್ರೀಮತಿ ಆಶಾ ಎಸ್.ರಾವ್ ಮತ್ತು ಶ್ರೀ ಸುಭಾಸ್ ರಾವ್, ಇಸ್ಲಾಂಪುರ (ಮಗಳು–ಅಳಿಯ)
ಶ್ರೀಮತಿ ಅನಿತಾ ದಲಾಲ್, ಮುಂಬಯಿ (ಮಗಳು)
ಶ್ರೀಮತಿ ಸಂಪದಾ ವಿ.ದೇಸಾಯಿ ಮತ್ತು ಶ್ರೀ ವಿದ್ಯಾಧರ ದೇಸಾಯಿ, ಕೊಲ್ಹಾಪುರ (ಮಗಳು–ಅಳಿಯ)
ಶ್ರೀಮತಿ ಅಂಜನಾ ವಿ.ರಾವ್ ಮತ್ತು ಶ್ರೀ ವಿಶ್ವನಾಥ ರಾವ್, ಕುಡಾಲ್ (ಮಗಳು–ಅಳಿಯ)
ಮೊಮ್ಮಕ್ಕಳು ಹಾಗೂ ಬಂಧುಮಿತ್ರರು

## ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಪದಗ್ರಹಣ



ಅಂತರಾಷ್ಟ್ರೀಯ ಮಟ್ಟದ ಸ್ಥಾನಿಕ ಬ್ರಾಹ್ಮಣ ಸಂಘಗಳ ಹಾಗೂ ಸಂಪನ್ಮೂಲ ವ್ಯಕ್ತಿಗಳ ಒಕ್ಕೂಟವಾದ ಸ್ಥಾನಿಕ ಬ್ರಾಹ್ಮಣ ಮಹಾ ಮಂಡಲದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಹಾಗೂ ಲಾಂಛನ ಬಿಡುಗಡೆಯು ತಾ.16-04-2017ನೇ ಆದಿತ್ಯವಾರ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇಲ್ಲಿ ಜರಗಿತು. ಸಭೆಯಲ್ಲಿ ಖ್ಯಾತ ವಾಗ್ಮಿ ಶ್ರೀ ಪ್ರಭಾಕರ ಜೋಷಿ ಉಪಸ್ಥಿತರಿದ್ದರು. ಕುಮಾರಿ ಶುಭಾಂಜನಳ ಪ್ರಾರ್ಥನೆಯೊಂದಿಗೆ ಸಭೆ ಆರಂಭವಾಯಿತು. ಶ್ರೀ ಜಿ.ಕೆ ಕೋಲ್ಟೆ ಇವರು ಸ್ವಾಗತ ಭಾಷಣ ಮಾಡಿದರು. ಮಹಾಮಂಡಲದ ಸ್ಥಾಪಕ ಅಧ್ಯಕ್ಷರಾದ ಶ್ರೀ ಸಿ.ಎಸ್. ರಾಯರು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನೂತನ ಅಧ್ಯಕ್ಷ ಶ್ರೀ ಎನ್. ಕೆ. ಜಗನ್ನಿವಾಸ ರಾಯರು, ಕಾರ್ಯದರ್ಶಿ ಶ್ರೀ ಬೆಳುವಾಯಿ ದೇವಾನಂದ ಭಟ್, ಕೋಶಾಧಿಕಾರಿ ಶ್ರೀ ಸಂಜಯ್ ರಾವ್, ಜತೆ ಕಾರ್ಯದರ್ಶಿ ಶ್ರೀ ನಂದಿಕೂರು ಜನಾರ್ಧನ್ ರಾವ್ ಹಾಗೂ ಶ್ರೀ ಧನಂಜಯ ಕುಮಾರ್ ಬೆಳ್ಳಂಗಡಿ ಇವರಿಗೆ ಶ್ರೀ ಸುಕುಮಾರ್ ಆಲಂಪಾಡಿ ಇವರು ಪ್ರಮಾಣವಚನ ಬೋಧಿಸಿದರು. ಕರ್ನಾಟಕ ಬ್ಯಾಂಕಿನ ಜನರಲ್ ಮ್ಯಾನೇಜರ್ ಶ್ರೀ ಬೊಕ್ಕಸ ಚಂದ್ರಶೇಖರ ರಾಯರು ಲಾಂಛನ ಬಿಡುಗಡೆ ಮಾಡಿದರು. ಶ್ರೀ ಎನ್.ಕೆ.ಜಗನ್ನಿವಾಸ ರಾಯರು ತಾವು ಕೈಗೊಳ್ಳಲಿರುವ ಕಾರ್ಯಕ್ರಮಗಳ ಬಗ್ಗೆ ವಿವರಿಸಿ ಸರ್ವರ ಸಹಕಾರ ಕೋರಿದರು. ನಿಕಟಪೂರ್ವ ಅಧ್ಯಕ್ಷ ಶ್ರೀ ಎಂ.ಆರ್.ವಾಸುದೇವ ಇವರು ನೂತನ ಆಡಳಿತ ಮಂಡಳಿಗೆ ಶುಭಕೋರಿದರು. ಕಾರ್ಯದರ್ಶಿ ದೇವಾನಂದ ಭಟ್ ಪ್ರಾಸ್ತಾವಿಕ ವಾಗಿ ಮಾತನಾಡಿದರು. ಡಾ.ವೈ.ಸುದರ್ಶನ ರಾವ್ ಇವರು ಮಹಾಮಂಡಲವನ್ನು ಸ್ಥಾಪನೆ ಮಾಡಿದ ಉದ್ದೇಶಗಳನ್ನು ಹಾಗೂ ಅದರ ಕಾರ್ಯವ್ಯಾಪ್ತಿಯ ಬಗ್ಗೆ ವಿವರಿಸಿದರು. ಶ್ರೀ ಧನಂಜಯ ಕುಮಾರ್ ಇವರು ಶುಭಾಶಂಸನೆ ಮಾಡಿದರು. ಶ್ರೀ ಸಂಜಯ ಕುಮಾರ್ ಧನ್ಯವಾದವಿತ್ತರು. ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ವಿವಿಧ ಸಂಘಗಳ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮವಿತ್ತು

## ವೈದಿಕ ಶಿಬಿರದ ಉದ್ಘಾಟನೆ



ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ, ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್, ಎ.ಬಿ.ಸಿ.ಡಿ.ಆ್ಯಂಡ್ ಇ.ಟ್ರಸ್ಟ್ ಇನ್ನ ಇವರು ಪ್ರಾಯೋಜಿಸಿದ ವೈದಿಕಶಿಬಿರವು ಬ್ರಹ್ಮಶ್ರೀ ಪಾವಂಜೆ ವಾಗೀಶಶಾಸ್ತ್ರಿಗಳ ನೇತೃತ್ವದಲ್ಲಿ ತಾ.05-05-2017ನೇ ಶುಕ್ರವಾರ ಆರಂಭವಾಯಿತು. ಪಡುಬಿದ್ರೆ ಸಂಘದ ಅಧ್ಯಕ್ಷ ಶ್ರೀ ಎಂ.ಕೆ.ದಿವಾಕರ ರಾವ್, ಮೊಕ್ತೇಸರ ಶ್ರೀ ಬಿ.ಜಯರಾಮರಾವ್, ಶ್ರೀ ಇನ್ನಾ ಚಂದ್ರಕಾಂತ ರಾವ್, ಶ್ರೀ ದೇವರಾಯ ಶರ್ಮ, ಶ್ರೀಮತಿ ಸೀತಾಭಾಸ್ಕರ್ ರಾವ್ ಉಪಸ್ಥಿತರಿದ್ದರು. ವಟುಗಳಿಗೆ ಉಳಿದುಕೊಳ್ಳುವ ವ್ಯವಸ್ಥೆ, ಊಟೋಪಚಾರ ಹಾಗೂ ವೈದ್ಯಕೀಯ ವ್ಯವಸ್ಥೆ ಮಾಡಲಾಗಿರುತ್ತದೆ. ಸುಮಾರು ಇಪ್ಪತ್ತು ವಟುಗಳು ಆಗಮಿಸಿದ್ದರು. ಅದೇ ದಿನ ಬ್ರಹ್ಮಕಲಶೋತ್ಸವ ದಿನಾಚರಣೆ ಹಾಗೂ ಶಂಕರಜಯಂತಿ ಕಾರ್ಯಕ್ರಮವು ನೆರವೇರಿತು. ಶ್ರೀಮತಿ ಸೀತಾ ಭಾಸ್ಕರ್ ರಾವ್ ಶ್ರೀ ಶಂಕರಾಚಾರ್ಯರ ಬಗ್ಗೆ ಉಪನ್ಯಾಸ ನೀಡಿದರು.

## ಮಹಾಪೋಷಕರಾಗಿ ಶ್ರೀ ನಂದಳಿಕೆ ಕೃಷ್ಣರಾವ್



ನಿವೃತ್ತ ಪ್ರಾಧ್ಯಾಪಕ, ಶಿಕ್ಷಣತಜ್ಞ ನಮ್ಮ ಸಮಾಜದ ಹಿರಿಯ ವ್ಯಕ್ತಿ ಉಡುಪಿ ದೊಡ್ಡಣಗುಡ್ಡೆಯ ನಿವಾಸಿ ಶ್ರೀ ನಂದಳಿಕೆ ಕೃಷ್ಣರಾಯರು ಶ್ರೀ ಶಾರದಾಪತ್ರಿಕೆಯ ಮಹಾಪೋಷಕರಾಗಿ ಪತ್ರಿಕೆಯನ್ನು ಹರಸಿದ್ದಾರೆ. ಶ್ರೀ ನಂದಳಿಕೆ ಕೃಷ್ಣರಾಯರು ನಂದಳಿಕೆಯಲ್ಲಿ ಶಿಕ್ಷಕರಾಗಿದ್ದ ಶ್ರೀ ಎನ್.ಸುಬ್ಬರಾವ್ ಹಾಗೂ ಗಿರಿಜಮ್ಮ ದಂಪತಿಗಳ ಪುತ್ರ. 1941ರಲ್ಲಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸ ನಂದಳಿಕೆಯಲ್ಲಿ, ಮುಂದೆ ಹಂತಹಂತವಾಗಿ ಎಸ್.ಎಸ್.ಎಲ್.ಸಿ, ಟಿ.ಸಿ.ಹೆಚ್, ಬಿ.ಎ, ಬಿ.ಎಡ್ ಹಾಗೂ ಪೊಲಿಟಿಕಲ್ ಸಾಯನ್ಸ್‌ನಲ್ಲಿ ಎಂ.ಎ ಪದವಿ ಪಡೆದ ಸಾಧಕ. ಹಾಗೆಯೇ ಶಿಕ್ಷಕ ವೃತ್ತಿಯ ಎಲ್ಲಾ ಮಜಲುಗಳಲ್ಲಿಯೂ ಪ್ರಾಥಮಿಕ ಶಾಲಾ ಶಿಕ್ಷಕನಾಗಿ ಹಿಡಿದು ಪದವಿ ಕಾಲೇಜಿನ ಅಧ್ಯಾಪಕನ ತನಕ ದುಡಿದ ಅನುಭವ ಅವರಿಗಿದೆ. ಅರಸಿನಮಕ್ಕಿ, ಬೈಲೂರು, ಹಿರಿಯಡ್ಕ ಎರ್ಮಾಳು ಉಡುಪಿ ಹಾಗೂ ಮಲ್ಪೆ ಹೀಗೆ ವಿವಿಧ ಊರುಗಳಲ್ಲಿ ಅವರನ್ನು ನೆನಪಿಸಿಕೊಳ್ಳುವ ಶಿಷ್ಯರಿದ್ದಾರೆ. ಸದಾ ನಗುಮುಖದ ಪ್ರಸನ್ನ ವ್ಯಕ್ತಿತ್ವದ ಆತ್ಮೀಯ ವ್ಯಕ್ತಿ. ಉಡುಪಿಯ ನಮ್ಮ ಸಂಘದ ಚಟುವಟಿಕೆಗಳಲ್ಲಿ ಸದಾ ಸಕ್ರಿಯರು. ಅವರ ಪತ್ನಿ ಶ್ರೀಮತಿ ಶಾರದಾರವರು ಸಿದ್ದಾಪುರದ ಮಾರ್ಪಳ್ಳಿ ಮಧ್ವರಾಯ ಜೋಯಿಷಿ ಹಾಗೂ ಗಂಗಮ್ಮನವರ ಪುತ್ರಿ. ಆದರ್ಶ ಗೃಹಿಣಿ. ದಂಪತಿಗಳಿಗೆ ಮೂವರು ಪುತ್ರಿಯರು ಮೊದಲನೆಯವರು ಶ್ರೀಮತಿ ವಾಣಿ ಎಂ.ಎ(ಗಣಿತ) ಪದವೀಧರೆ. ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಎರಡನೆಯವರು ಡಾ। ಕಣ್ಮಣಿ ಆಯುರ್ವೇದ ಸ್ನಾತಕೋತ್ತರ ಪಧವೀಧರೆ. ಬೆಂಗಳೂರಿನಲ್ಲಿ ಸರಕಾರಿ ವೈದ್ಯಾಧಿಕಾರಿಣಿ. ಮೂರನೆಯವರು ಡಾ। ಕಿರಣ ಮಕ್ಕಳ ತಜ್ಞರು ಅಮೇರಿಕಾದಲ್ಲಿ ನೆಲೆಸಿದ್ದಾರೆ. ಇದೇ ವರ್ಷ ಅಕ್ಟೋಬರ್‌ನಲ್ಲಿ 75ನೇ ಹುಟ್ಟುಹಬ್ಬವನ್ನು ಆಚರಿಸಲಿರುವ ಶ್ರೀ ನಂದಳಿಕೆ ಕೃಷ್ಣರಾಯರು ನಮ್ಮ ಶ್ರೀಶಾರದಾ ಬಳಗವನ್ನು ಸೇರಿರುವ ಈ ಸುಸಂದರ್ಭದಲ್ಲಿ ನಾವು ಅವರಿಗೆ ಶ್ರೀ ಶಾರದೆಯ ಕೃಪಾಕಟಾಕ್ಷ ಸದಾ ಕಾಲ ಇರಲಿ ಎಂದು ಹಾರೈಸುತ್ತೇವೆ.

## ಅದಮಾರು ಶ್ರೀಧರ ರಾಯರಿಗೆ ಹುಟ್ಟೂರ ಅಭಿವಂದನೆ



ನಿವೃತ್ತ ಶಿಕ್ಷಕ, ಎಲ್ಲೂರು ಕಾಶೀ ಸಂತಾನ ಟ್ರಸ್ಟ್‌ನ ಪ್ರವರ್ತಕ ಅದಮಾರು ಶ್ರೀಧರರಾಯರಿಗೆ ತೊಂಬತ್ತು ತುಂಬಿದ ಸಂಭ್ರಮವನ್ನು ಅವರ ಶಿಷ್ಯರು ಅಭಿಮಾನಿಗಳು ಹಾಗೂ ಗ್ರಾಮಸ್ಥರು ಅದ್ದೂರಿಯಾಗಿ ಅಭಿವಂದನಾ ಸಮಾರಂಭವನ್ನು ತಾ.23-04-2017ರಂದು ಅದಮಾರಿನ ಸಮುದಾಯ ಭವನದಲ್ಲಿ ಆಯೋಜಿಸಿದ್ದರು. ಕರ್ನಾಟಕ ಸರ್ಕಾರದ ನಿವೃತ್ತ ಅಟಾರ್ನಿ ಜನರಲ್ ಶ್ರೀ ಬಿ.ವಿ.ಆಚಾರ್ಯ, ಕೇಂದ್ರ ಸರಕಾರದ ಹಿರಿಯ ಅಧಿಕಾರಿ ಡಾ. ವೈ. ಅವನೀಂದ್ರನಾಥ ರಾವ್ ಎಲ್ಲೂರು ದೇವಳದ ಮೊಕ್ತೇಸರ ಶ್ರೀ ಪ್ರಫುಲ್ಲಚಂದ್ರ ಶೆಟ್ಟಿ, ಎರ್ಮಾಳು ಗುತ್ತಿನ ಮನೆ ಅಶೋಕ್‌ರಾಜ್ ಇವರು ವೇದಿಕೆಯಲ್ಲಿದ್ದರು. ಶ್ರೀಯುತರ ಸಾಧನೆಗಳನ್ನು ಗಣ್ಯರು ಉಲ್ಲೇಖಿಸಿ ಅಭಿನಂದನಾ ಪತ್ರ, ಶಾಲು ಫಲಪುಷ್ಪಗಳೊಂದಿಗೆ ಸನ್ಮಾನಿಸಿದರು. ಶ್ರೀ ಶಾರದಾಮಂಟಪದ ವತಿಯಿಂದ ಶ್ರೀ ವೈ.ಭುವನೇಂದ್ರರಾವ್ ಹಾಗೂ ಡಾ.ವೈ.ಸುದರ್ಶನ ರಾವ್ ಶಾಲು ಹೊದಿಸಿ ಗೌರವಿಸಿದರು.

**With Best Compliments From :**



SMT. VIDYA & SRI K. VASUDEVA RAO

*Deepika Digital Studio & Video*
*Deepika International Travels*

WE UNDERTAKE

- Studio Portrait
- Digital Creation
- Outdoor Photography Making
- Digital Albums
- Video Coverage (Cinematography)
- Lamination & Frames
- Led Wall, Crane & Spot Mixing
- Air Ticket (Domestic & International)
- Passport Assistance
- Train Tickets
- Bus Tickets
- Attestation Certificate
- Western Union
- Emigration (ECNR)

Opp. Kediyoor Hotel, Near Service Bus Stand, Udupi - 576 101.
E-mail : deepika.tra@gmail.com
Ph : 0820-2520652 / 4295862 Mobile : 9845177795 / 9845650449

Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@gmail.com Website : www.srisharada.org